₹ 5/-

# ನೇಸರು

## ತಿಂಗಳೋಲೆ

PAGES 20

JUNE 2023 | Nesaru Tingalole | Vol. XLI - 06



## ಮುಂಬಯಿಯಲ್ಲಿ ಮಳೆ

ಮೈಸೂರು ಅಸೋಸಿಯೇಷನ್ ಮುಂಬೈ

**THE MYSORE ASSOCIATION, BOMBAY**


393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

## CONGRATULATIONS

*We are elated to share that our young members of Mysore Association (Youth Wing) Ms. Anika Radhakrishnanan and Ms. Arohi Radhakrishnanan have scored 95% in their 10th Boards from Prestigious School in Mumbai.*

*Twin Daughter of Smt. & Shri Radhakrishnanan S.*



# THE MYSORE ASSOCIATION, BOMBAY

# ಮೈಸೂರು ಅಸೋಸಿಯೇಷನ್, ಮುಂಬೈ

*presents*

## KARNATIC CLASSICAL VOCAL

by

## Krittika Srinivasan & Troupe

on Saturday, June 17, 2023, @ 6.30 pm

**Venue:**

The Mysore Association's Conference Hall.

***All are cordially invited***

ನೇಸರು ತಿಂಗಳೋಲೆ

ಸಂಪುಟ 41 ಜೂನ್–2023 ಸಂಚಿಕೆ 6

# ಕರ್ಮ



✍ **ಡಾ. ಜ್ಯೋತಿ ಸತೀಶ್**

ಹಿಂದೆ ಹಿರಿಯರು ಹೇಳುತ್ತಾ ಇದ್ದರು. "ನಿನ್ನ ಜೊತೆ ಸದಾ ಇರುವುದು, ಒಂದು ನೀನು ಮಾಡಿದ ಕರ್ಮ ಇನ್ನೊಂದು ನಿನ್ನ ನೆರಳು". ಈ ಜನ್ಮದಲ್ಲಿ ನಾವೇನು ಅನುಭವಿಸುತ್ತೇವೋ ಅದಕ್ಕೆಲ್ಲ ನಾವು ನಮ್ಮ ಹಿಂದಿನ ಜನ್ಮದ ಕರ್ಮದತ್ತ ಬೆರಳು ತೋರಿಸುತ್ತೇವೆ. ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮವನ್ನು ಈ ಜನ್ಮದಲ್ಲಿ ಅನುಭವಿಸುತ್ತಿದ್ದೇವೆ ಅಂತ. ಅದು ನಿಜವಲ್ಲ. ನಾವು ಈ ಜನ್ಮದಲ್ಲಿ ಏನೇನು ಕರ್ಮ ಮಾಡುತ್ತೇವೋ ಅದರ ಫಲ ಈ ಜನ್ಮದಲ್ಲೇ ಅನುಭವಿಸಿಯೇ ಹೋಗುತ್ತೇವೆ. ಸ್ವರ್ಗ ನರಕ ಅನ್ನೋ ಪರಿಕಲ್ಪನೆಯನ್ನು ಇಟ್ಟುಕೊಂಡಿರುತ್ತೇವೆ. ಮೇಲೆ ಹೋಗಿ ಅನುಭವಿಸುವುದು ಏನೂ ಇಲ್ಲ. ಸ್ವರ್ಗ, ನರಕದಲ್ಲಿ ಏನೇನು ಅನುಭವಿಸುತೇವೋ ಅದನ್ನು ನಾವು ಮನುಷ್ಯ ಜನ್ಮದಲ್ಲಿ ಇಲ್ಲಿಯೇ ಎಲ್ಲ ಅನುಭವಿಸಿಯೇ ಹೋಗುತ್ತೇವೆ. ಹಿಂದೆ ತಂದೆ ತಾಯಿಗಳು ಮಾಡಿದ ಪಾಪ ಮಕ್ಕಳಿಗೆ ಬರುತ್ತೆ ಅಂತ ಹೇಳುತ್ತಾ ಇದ್ದರು. ಆದರೆ, ಈಗ ಹಾಗಲ್ಲ! ಯಾರು ಮಾಡಿದ ಕರ್ಮ ಅವರೇ ಅನುಭವಿಸಬೇಕು. ಅದಕ್ಕೆ ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೀಗೆ ಹೇಳುತ್ತಾನೆ. "ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ್" ನೀನು ನಿನ್ನ ಕರ್ಮ ಮಾಡು, ಅದರ ಫಲದ ಚಿಂತೆ ಮಾಡಬೇಡ. ನಿನ್ನ ಕರ್ತವ್ಯ ಏನಿದೆಯೋ ಅದನ್ನು ಮಾಡು, ಪ್ರತಿಫಲದ ಚಿಂತೆ ನನಗೆ ಬಿಟ್ಟು ಬಿಡು. ಆದರೆ ಪ್ರಸ್ತುತ, ಮನುಷ್ಯ ಯಾವುದೇ ಕಾರ್ಯ ಮಾಡುವ ಮೊದಲು ಅದರಿಂದಾಗುವ ಲಾಭ ನಷ್ಟವನ್ನು ಯೋಚಿಸದೇ ಇರಲಾರ.

ಇನ್ನೊಬ್ಬರ ಜೀವನವನ್ನು ಹಾಳುಮಾಡುವುದೇ ಕರ್ಮ ಅಲ್ಲ. ಹಗೆ ಸಾಧಿಸಲು ಸಮಯ ವ್ಯರ್ಥ ಮಾಡಬಾರದು. ಒಬ್ಬರ ಮನಸ್ಸನ್ನು ವಿನಾಕಾರಣ ನೋಯಿಸಿದರೆ, ಕೊನೆಗೆ ಅವರ ಕರ್ಮವನ್ನು ಅವರೇ ಎದುರಿಸುತ್ತಾರೆ. ಹೀಗೆ ಯೊಚಿಸಿದರೆ, ನಮ್ಮಲ್ಲಿ ಎಷ್ಟೋ ಅಪರಾಧಗಳು ಕಡಿಮೆ ಆಗಬಹುದು ಅಲ್ಲವೇ? ನಮ್ಮ ಭಗವದ್ಗೀತೆಯಲ್ಲಿ ಹೇಳಿರುವ ಚಿಂತನೆಗಳನ್ನು ನಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡಾಗ, ಜೀವನ ಎಷ್ಟೊಂದು ಸುಂದರವಾದುದು, ಹಾಗೇ ಸರಳವಾದುದು ಅಂತ ನಮಗನಿಸದೇ ಇರದು. ಮನುಷ್ಯನಾದವನಿಗೆ ಕೋಪ ಬರುವುದು ಸಹಜ. ಯಾವ ಕ್ಷಣದಲ್ಲಿ ನಿಮಗೆ ಕೋಪ ಬರುತ್ತದೋ, ಆ ಕ್ಷಣಕ್ಕೆ ಏನನ್ನೂ ಪ್ರತಿಕ್ರಿಯಿಸದೇ ಆ ಜಾಗ ಖಾಲಿ ಮಾಡಿದರೆ ಮನಸ್ಸಿಗೆ ಎಷ್ಟೋ ಶಾಂತಿ ಸಿಗುತ್ತದೆ. ಮನೆಯಲ್ಲಿ ಜಗಳವೂ ಕಡಿಮೆಯಾಗುತ್ತದೆ. ಮಾತಿಗೆ ಮಾತು ಬೆಳೆಸಿದರೆ, ಜಗಳ ದೊಡ್ಡದಾಗುತ್ತದೆ. ಅದೇ ಒಬ್ಬರು ಅಲ್ಲಿ ಮೌನವಹಿಸಿದರೆ, ಜಗಳ ಮುಂದುವರಿಯಲು ಆಸ್ಪದವೇ ಇಲ್ಲ. ಮತ್ತೇ ಮನಸ್ಸು ಶಾಂತವಾದ ಮೇಲೆ, ಅದು ಹೀಗಲ್ಲ ಹೀಗಾಗಬೇಕಿತ್ತು ಅಂತ ಸಮಾಧಾನದಿಂದ ಉತ್ತರವಿತ್ತಾಗ ಬದುಕು ಸುಗಮವಾಗುತ್ತದೆ. ಜೀವನದಲ್ಲಿ ತಾಳ್ಮೆ ಬಹಳ ಮುಖ್ಯ. ಇವತ್ತು ನಮ್ಮ ಸಮಯ ಚೆನ್ನಾಗಿಲ್ಲ ಆದರೆ ಮುಂದೊಂದು ನಮ್ಮ ಜೀವನದಲ್ಲೂ ಒಳ್ಳೆ ಸಮಯ ಬರುತ್ತೇ ಅಂತ ಆಶಾವಾದಿಯಾಗಿ ಬದುಕಬೇಕು. ರಾತ್ರಿ ಕಳೆದ ಮೇಲೆ ಹಗಲು ಬರಲೇಬೇಕಲ್ಲವೇ! ಎಲ್ಲ ನೋವಿಗೂ ಕಾಲವೇ ಉಪಶಮನ. ಶ್ರೀಕೃಷ್ಣ ಹೇಳಿದ ಹಾಗೆ "ಯಾವಾಗ ಸಮಯ ನ್ಯಾಯವನ್ನು ಹೇಳುತ್ತದೋ ಆಗ ಸಾಕ್ಷಿಗಳ ಅಗತ್ಯವಿಲ್ಲ" ಎಷ್ಟೊಂದು ಅರ್ಥಪೂರ್ಣವಾದ ಮಾತಲ್ಲವೇ!

ಇನ್ನು ನಾವು ಸಮಾಜಕ್ಕೆ ಏನು ನೀಡುತ್ತೇವೋ ಅದನ್ನೇ ಪಡೆಯುತ್ತೇವೆ. ಉದಾಹರಣೆಗೆ ಪ್ರೀತಿ, ದ್ವೇಷ, ಅಸೂಯೆ, ಕರುಣೆ ಯಾವುದಾದರೂ ಆಗಿರಬಹುದು. ನೀವು ಯಾವ ಭಾವನೆಯನ್ನು, ಕರ್ಮವನ್ನು ಜಗತ್ತಿಗೆ ನೀಡುತ್ತಿರೋ ಅದನ್ನೇ ನೀವು ಪುನಃ ಪಡೆಯುವಿರಿ. ಆದ್ದರಿಂದ ಪ್ರೀತಿ, ಕರುಣೆ, ಮಾನವೀಯತೆಯನ್ನು ಸಮಾಜಕ್ಕೆ ನೀಡಿ. ಅದನ್ನೇ ಪಡೆಯುವಿರಿ.

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
ನೀಲಕಂಠ
***

ಬೆಂಗಳೂರು ಪ್ರತಿನಿಧಿ
ಎಂ. ಎ. ಎನ್. ಪ್ರಸಾದ್
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.
– ಸಂ.

The views expressed by the contributors in this journal are theirs and not of the Association and the Association is not in anyway responsible for the same.
- Ed.
****

ಸಂಪರ್ಕ ವಿಳಾಸ:
ನೇಸರು
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ
ಮುಂಬಯಿ – 400 019.
✆ 24037065
Email:
mysoreassociation.mumbai@gmail.com
Website:
www.mysoreassociation.in

(ಕಳೆದ ಸಂಚಿಕೆಯಿಂದ)

# ಹೀಗಿತ್ತು ಮಲೆನಾಡು



✍ ಜಿ.ವಿ.ನವಿಲೇಕರ್

(ಈ ದೀರ್ಘ ಲೇಖನವು ಕೊಳವಳ್ಳಿ ಪ್ರಕಾಶನ ಪ್ರಕಟಿಸಿರುವ "ನನ್ನೊಳಗಿನ ಮಲೆನಾಡು "ಪುಸ್ತಕದಲ್ಲಿ ಪ್ರಕಟವಾಗಿದೆ)

**ಶಾಲೆಯ ನೆನಪುಗಳು:** ಮಕ್ಕಳ ಬಾಲ್ಯದ ಆಟ, ಪಾಠ ದೊಡ್ಡವರಿಗೆ ನೋಡಲು ಚೆನ್ನಾಗಿರುತ್ತದೆ. ಬಾಲ್ಯದ ನೆನಪುಗಳು ಸುಮಾರು ಐದು ಆರು ವರ್ಷಗಳ ನಂತರವೇ ನೆನಪಿನಲ್ಲುಳಿಯುವುದು. ಬಹುಶಃ ಈ ವಯಸ್ಸಿನ ನಂತರ ನೆನಪಿನ ಮೆದುಳು ಭಾಗ ವೃದ್ಧಿ ಆಗುವುದೆಂದು ತೋರುತ್ತದೆ. ಐದು ಆರು ವರ್ಷವಾದೊಡನೆಯೇ ಶಾಲೆಗೆ ದಾಖಲಾಗುವ ಘಟ್ಟ ಬಂದಿರುತ್ತದೆ. ೭೫ ವರ್ಷಗಳ ಹಿಂದೆ ಐದನೇ ವರ್ಷಕ್ಕೆ ಪ್ರಾಥಮಿಕ ಶಾಲೆಗೆ ದಾಖಲು ಮಾಡಿಕೊಳ್ಳುತ್ತಿದ್ದರು. ಈಗ ಶಾಲೆಗೆ ಸೇರಿಸಲು ೬ ವರುಷದ ವಯೋಮಿತಿ ಇದೆ. ಆದರೆ ೨-೩ ವರ್ಷದ ಮಕ್ಕಳನ್ನು ಮನೆ ಬಿಡಿಸಿ 'ಬೇಬಿ ಸಿಟ್ಟಿಂಗ್" ಎಂಬ ನವ ರಕ್ಷಕ ವ್ಯವಸ್ಥೆ ಬೇರೆ ಬಂದಿದ್ದು, ಚಿಕ್ಕ ಚಿಕ್ಕ ಮಕ್ಕಳೂ ಅಳುತ್ತ- ಕರೆಯುತ್ತ ಬೇಬಿ ಸಿಟ್ಟಿಂಗ್ ನಲ್ಲಿ ಯಾರ್ಯಾರದೋ ಅಂಕೆಯಲ್ಲಿ ಬಾಲ್ಯವನ್ನು ಕಳೆಯಬೇಕಾದ ಕಾಲ ಬಂದಿದೆ.ಕಾಲದ ಅನಿವಾರ್ಯ ಒತ್ತಡವೇ ಇರಬೇಕು.

ಅಂದು ಇಂದಿನಂತೆ ಎಲ್.ಕೆ.ಜಿ, ಯು.ಕೆ.ಜಿಗಳಿರಲಿಲ್ಲ. ಐದು ವರ್ಷಕ್ಕೆ ಪ್ರಾಥಮಿಕ ಶಾಲೆಯ 'ಎ' ಕ್ಲಾಸಿಗೆ ದಾಖಲು ಮಾಡುತ್ತಿದ್ದರು. ಪ್ರಾರಂಭದಲ್ಲಿ ಶಾಲೆಗೆ ದಾಖಲಾಗುವ ದಿನ ತಂದೆ, ತಾಯಿಯ ಅಥವಾ ಪೋಷಕರ ಜೊತೆಗೆ ಶಾಲೆಗೆ ಹೋದ ಮಗು ಆಶ್ಚರ್ಯದಿಂದಲೂ, ಗಂಭೀರವಾಗಿಯೂ ಹೋಗುತ್ತಿತ್ತು. ಹೊಸ ವಾತಾವರಣ, ಹೊಸ ಸನ್ನಿವೇಶ ಹೀಗಾಗಿ ಆಶ್ಚರ್ಯ- ಕೌತುಕವಿರುತ್ತೆಂದು ಊಹೆ ಹಾಗೂ ವಾಸ್ತವ. ನಂತರ ಮಾರನೇ ದಿವಸ ಶಾಲೆಗೆ ಹೋಗಲು ಸ್ವಲ್ಪ ಕಸಿವಿಸಿ. ಮೂರನೇ ದಿನದಿಂದ ಶಾಲೆಗೆ ಬೇಡವೆಂಬ ಸಣ್ಣ ಹಟ. ನಾಲ್ಕನೇ ದಿನ ಶಾಲೆಗೆ ಹೋಗುವುದೇ ಇಲ್ಲವೆಂಬ ರೊಚ್ಚೆ-ಹಟ. ಮಕ್ಕಳನ್ನು ಹೊತ್ತಾದರೂ ಶಾಲೆಗೆ ಕರೆದುಕೊಂಡು ಹೋಗಿ ತುಂಬುತ್ತಿದ್ದರು. ಇವೆಲ್ಲಾ ಅಂದಿನ ಅನುಭವವೂ ಹೌದು. ಇಂದಿಗೂ ಸತ್ಯ.

ಕ್ರಮೇಣ ಶಾಲೆಯ ಪರಿಸರಕ್ಕೆ ಒಗ್ಗಿದ ಮಕ್ಕಳು ಹೆಚ್ಚಿಗೆ ತಕರಾರು ಮಾಡುತ್ತಿರಲಿಲ್ಲ. ಬಹು ಪೂರ್ವದಲ್ಲಿ ಅಕ್ಷರಾಭ್ಯಾಸ ಮರಳಿನಲ್ಲಿ ಮಾಡಬೇಕಿತ್ತು. ನಂತರ ಸ್ಲೇಟು ಬಳಪ ಬಂತು. ಈ ಲೇಖಕ ಪ್ರಾಥಮಿಕ ಶಾಲೆಗೆ ದಾಖಲಾದಾಗ ಸ್ಲೇಟು ಬಳಪ ಶುರುವಾಗಿತ್ತು. ಹಾಗೂ-ಹೀಗೂ ೧ನೇ ತರಗತಿ ಕಳೆಯುತ್ತಿತ್ತು. ಎರಡನೇ ತರಗತಿಯಿಂದ ಶುರು ಲೆಕ್ಕ ಮತ್ತು ಮಗ್ಗಿ ಪಾಠ. ಸಾಮಾನ್ಯವಾಗಿ ಎಲ್ಲ ಮಕ್ಕಳೂ, ದೊಡ್ಡವರು ಸಹಾ ಲೆಕ್ಕವೆಂದರೆ ಬೇಸರ ಮತ್ತು ಕಷ್ಟವೆಂದು ಗೊಣಗುಡುವ ವಿಷಯ. ಆ ಕಾಲದಲ್ಲಿ ಲೆಕ್ಕಕ್ಕೆ ಮೊದಲು ಅಥವಾ ಲೆಕ್ಕದ ಜೊತೆಗೇ ಮಗ್ಗಿ ಕಡ್ಡಾಯವಾಗಿ ಬಾಯಿಪಾಠ ಮಾಡಲೇಬೇಕಿತ್ತು. ಇದರೊಂದಿಗೆ ವಾರಗಳು, ಸಂವತ್ಸರಗಳು, ಋತುಗಳು, ಆಯನಗಳು, ನಕ್ಷತ್ರನಾಮಗಳು ಮುಂತಾಗಿ ಅನೇಕ ವಿಷಯಗಳನ್ನು ಬಾಯಿಪಾಠ ಮಾಡಬೇಕಿತ್ತು. ಇದಕ್ಕಾಗಿ ಮಕ್ಕಳು ಶಾಲೆಯಿಂದ ಬಂದೊಡನೆ ಆಟವಾಡಿಕೊಂಡು, ಮುಸ್ಸಂಜೆ ಸುಮಾರು ಈ ವಿಷಯಗಳನ್ನು ಬಾಯಿಪಾಠ (ಕಂಠಪಾಠ) ಮಾಡಲೇಬೇಕಿತ್ತು. ಇದರಲ್ಲಿ ಮನೆಯವರು ಒತ್ತಡವೂ ಇರುತ್ತಿತ್ತು. ತಪ್ಪಿದಲ್ಲಿ ಶಿಕ್ಷೆಯೂ ಇರುತ್ತಿತ್ತು.

ಆದರೆ ಶಾಲೆಯಲ್ಲಿ ಈಗಿನಂತೆ ಅನೇಕ ವಿಷಯಗಳು ಮತ್ತೆ ಇದಕ್ಕೆ ಸಂಬಂಧಿಸಿದಂತೆ ಪಠ್ಯಪುಸ್ತಕಗಳು ಇರಲಿಲ್ಲ. ಈಗಿನಂತೆ ಪಠ್ಯಪುಸ್ತಕಗಳ ರಾಶಿಯನ್ನು ದಿನವೂ ಚೀಲದಲ್ಲಿ ಬೆನ್ನಮೇಲೆ ಹೊತ್ತು ಶಾಲೆಗೆ ಸಾಗುವುದು ಇರಲಿಲ್ಲ. ಹಾಗೆಯೇ ಅಲಂಕಾರಿಕ ಬೂಟು, ಚಲ್ಲಣಗಳ ಯೂನಿಫಾರ್ಮ್ ಡ್ರೆಸ್ ನ ಅಭ್ಯಾಸವಾಗಲಿ, ಆತಂಕವಾಗಲಿ ಇರಲಿಲ್ಲ. ಸರಳವಾಗಿ ಅಂಗಿ ಚಡ್ಡಿ ಇದ್ದರಾಯಿತು. ಇನ್ನೂ ಕೆಲವು ಕಡೆ ಮಾತ್ರ ಟೋಪಿ ಕಡ್ಡಾಯವಿರುತ್ತಿತ್ತು. ಅಂತೂ ಶಾಲೆಯಂತೆಯೇ ಮನೆಯಲ್ಲಿಯೂ ವಿದ್ಯಾಭ್ಯಾಸಕ್ಕೆ ಒತ್ತಡವೂ, ಶಿಕ್ಷೆಯೂ ತುಂಬಾ ಇರುತ್ತಿತ್ತು. ಮಾಧ್ಯಮಿಕ ಶಾಲೆಗಳೇ ಅಪರೂಪ. ತುಂಬಾ ದೂರ ದೂರದಲ್ಲಿ ಒಂದು ಮಾಧ್ಯಮಿಕ ಶಾಲೆ ಇರುತ್ತಿದ್ದು, ವಿದ್ಯಾಭ್ಯಾಸಕ್ಕಾಗಿ ದಾಖಲಾಗುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆಯೂ ತುಂಬಾ ವಿರಳವಾಗಿರುತ್ತಿತ್ತು. ಹೈಸ್ಕೂಲುಗಳು ಜಿಲ್ಲಾಕೇಂದ್ರಗಳಲ್ಲಿಯೇ ಸರಿ. ಅಂತೂ ಆಗ ಮಲೆನಾಡಿನಲ್ಲಿ ಲೋಯರ್ ಸೆಕೆಂಡರಿ ಎಂದು ಕರೆಯಲ್ಪಡುತ್ತಿದ್ದ ಈಗಿನ ೮ನೇ ತರಗತಿಯಾದೊಡನೆ ವಿದ್ಯಾಭ್ಯಾಸ ಖೈದು ಮಾಡುತ್ತಿದ್ದ ಕಾಲ. ಅವಿಭಕ್ತ ಕುಟುಂಬಗಳೂ ಇದ್ದು, ಕೃಷಿ ವ್ಯವಸಾಯಕ್ಕೆ ಆದ್ಯತೆಯೂ ಇದ್ದ ಕಾಲವಾದ್ದರಿಂದ, ಇಷ್ಟೇ ವಿದ್ಯೆ ಸಾಕಾಗಿದ್ದಿತ್ತಾಗಿ ತೋರುತ್ತೆ. ಇಷ್ಟೇ ವಿದ್ಯೆಯಲ್ಲೇ ಶಾಂತಿಯಿಂದ ಬಾಳು ನಡೆಸುತ್ತಿದ್ದರು.

**ಮಲೆನಾಡಿನ ದೈವ–ದೇವತಾರಾಧನೆಗಳು, ನಂಬಿಕೆಗಳು, ಪರಿಹಾರಗಳು:** ದೇವತಾರಾಧನೆಗೆ ಸಂಬಂಧಿಸಿದಂತೆ ಮಲೆನಾಡಿನಲ್ಲಿ ಹಿಂದು ಪದ್ಧತಿಯ ಎಲ್ಲ ಹಬ್ಬಗಳನ್ನು ಸಾಂಪ್ರದಾಯಿಕವಾಗಿ ಆಚರಿಸುವ ಪರಿಪಾಠವಿತ್ತು. ಗೌರಿ ಗಣಪತಿ ಹಬ್ಬಗಳಲ್ಲಿ ಆಚಾರಕ್ಕೆ ತುಂಬಾ ಮಹತ್ವವಿದ್ದು, ಇತರೇ ಹಬ್ಬಗಳಿಗೆ ಸಂಭ್ರಮ ಜಾಸ್ತಿ ಇದ್ದ ಕಾಲ. ದೀಪಾವಳಿ ಮತ್ತು ಉಗಾದಿ ಹಬ್ಬಗಳಿಗೆ ಎಣ್ಣೆ ಅಭ್ಯಂಜನ ಮತ್ತು ಹೊಸಬಟ್ಟೆ ಧಾರಣ ಕಡ್ಡಾಯದಂತಿತ್ತು. ಮಕ್ಕಳು ಮತ್ತು ದೊಡ್ಡವರ ಹುಟ್ಟಿದ ಹಬ್ಬವನ್ನು ನೆಂಟರಿಷ್ಟರ ಜೊತೆ ಸುಗ್ರಾಸ ಭೋಜನದೊಡನೆ ಆಚರಿಸುತ್ತಿದ್ದರು.

ಈ ಸಾಂಪ್ರದಾಯಿಕ ಹಬ್ಬಗಳಲ್ಲದೆ, ವ್ಯವಸಾಯದ ಜಮೀನಿನಲ್ಲಿ ಲಾಗಾಯ್ತಿನಿಂದ ಆಚರಣೆ ಮತ್ತು ನಂಬಿಕೆಗಳಿಗೊಳಪಟ್ಟು ನಡೆಸಿಕೊಂಡುಬಂದ ದೈವಾದಿ ಶಕ್ತಿಗಳಾದ ಚೌಡಿ, ಬ್ರಹ್ಮ, ನಾಗ, ಪಂಜುರ್ಲಿ ಮುಂತಾದವುಗಳಿಗೆ ಅಲ್ಲಲ್ಲಿ ಅವರವರ ಸಂಪ್ರದಾಯಕ್ಕನುಸಾರವಾಗಿ ಪ್ರತಿವರ್ಷ ಹರಕೆ ಪೂಜೆ ಸಮರ್ಪಣೆ, ಆರಾಧನೆ ಕಾರ್ಯಕ್ರಮಗಳು ಇರುತ್ತಿದ್ದವು. ಈಗಲೂ ಸಹಾ ಇವೆ. ಈ ರೀತಿ ದೈವ-ದೇವರುಗಳ ಆರಾಧನೆ ಯಾವ ಕಾಲದಲ್ಲಿ ಶುರುವಾಯಿತೆಂದು ಯಾರಿಗೂ  ಈವರೆಗೂ ತಿಳಿಯದು. ಬ್ರಿಟಿಷರ ಆಳ್ವಿಕೆ ಕಾಲದಲ್ಲಿ ಭೂಮಾಪನ ಮಾಡಿ ಭೂಕಂದಾಯ ನಿರ್ಣಯಿಸುವ ಕಾಲದಲ್ಲಿ ಇಂತಹ ದೈವ- ದೇವರುಗಳಿಗೆ ಇದ್ದ ಇನಾಂ ಜಮೀನುಗಳನ್ನು ಗುರ್ತಿಸಿ ಸದ್ರಿ ಇನಾಂಗಳನ್ನು ಹಾಗೆಯೇ ಉಳಿಸಿಕೊಂಡು ಬಂದರಲ್ಲದೆ, ಕೆಲವು ದೈವ-ದೇವರುಗಳ ಸೇವೆಗಾಗಿ ಸರಕಾರದಿಂದ 'ತಸ್ತೀಕ್' ಎಂಬ ಹೆಸರಿನಲ್ಲಿ ವಾರ್ಷಿಕವಾಗಿ ನಗದು (ಗ್ರಾಂಟ್) ಸಹಾ ಪಾವಿಸುವ ಕಾನೂನು ವ್ಯವಸ್ಥೆ ಸಹಾ ಇದ್ದುದು ಕಂಡುಬರುತ್ತದೆ. ಈಚೆಗೆ ಇನಾಂ ಜಮೀನುಗಳು ವಜಾ ಆದರೂ ನಗದಿ ಗ್ರಾಂಟುಗಳು ಮತ್ತು ಸಂಬಳ ಪೂಜಾರಿಗಳಿಗೆ ಮತ್ತು ದೇವರ ಸೇವೆಗೆ ಪ್ರಾಪ್ತಿಯಾಗುವಂತಹ ಹೊಸ ವ್ಯವಸ್ಥೆ ಸಹಾ ಬಂದಿದೆ. ವ್ಯವಸಾಯಕ್ಕೆ ಸಂಬಂಧಿಸಿದ ಜಮೀನುಗಳ ಮತ್ತು ಫಸಲು ಸಂರಕ್ಷಣೆಗಾಗಿ ಈ ದೈವ ದೇವರ ಸೇವೆ ಆರಾಧನೆ ನಡೆದು ಬಂದಿರುವುದಾಗಿ ಪೂರ್ವಿಕರು ಹೇಳುತ್ತಿದ್ದರು. ಈಗಲೂ ಸಹಾ ಮಲೆನಾಡಿನ ಎಲ್ಲಾ ಜಮೀನುಗಳಲ್ಲಿಯೂ, ಈ ದೈವ ದೇವರುಗಳಿದ್ದು, ವಾರ್ಷಿಕ ಹರಕೆ, ಪೂಜೆ ಸೇವೆ ಸಲ್ಲುತ್ತಿದೆ. ಹಾಗೂ ಇವತ್ತಿಗೂ ಈ ಶಕ್ತಿ ದೇವತೆಗಳು ಅಲ್ಲಲ್ಲಿ ತಮ್ಮ ಪ್ರಭಾವವನ್ನು ತೋರಿಸುತ್ತಿರುವ ವದಂತಿಗಳು ಕರ್ಣಾಕರ್ಣಿಕೆಯಾಗಿ ಕೇಳಿಬರುತ್ತಿವೆ.

ಇದಕ್ಕೆ ದೃಷ್ಟಾಂತವಾಗಿ ಈ ಲೇಖಕನ ಅನುಭವವೊಂದನ್ನು ತಿಳಿಸಿದರೆ ಉತ್ಪ್ರೇಕ್ಷೆಯಾಗಲಾರದು. ಈ ಲೇಖಕನ ಮನೆಯ ಸಮೀಪ 'ಬುತ್ತಿ ಬ್ರಹ್ಮ'ವೆಂದು ಕರೆಯಲ್ಪಡುವ ಬ್ರಹ್ಮನ ಬನ ಒಂದಿದ್ದು, ಈ ಬನದಲ್ಲಿ ಪೂರ್ವದವರು ಬ್ರಹ್ಮ ಶಿಲೆಯನ್ನು ಸ್ಥಾಪನೆ ಮಾಡಿದ್ದಾರೆ. ಈ ಬ್ರಹ್ಮನಿಗೆ ಸೇವೆಗಾಗಿ ಇನಾಂ ಆಗಿ ಕೊಂಚ ಅಡಿಕೆ ತೋಟ ಸಹಾ ಇನಾಂ ಬಿಟ್ಟಿದ್ದು ಇನಾಂ ವಹಿವಾಟುದಾರರ ಸ್ವಾಧೀನದಲ್ಲಿದೆ. ಇವರು ವಾರ್ಷಿಕವಾಗಿ ನೇಮದಂತೆ ಸೇವೆ ಸಲ್ಲಿಸುತ್ತಿದ್ದಾರೆ. ಈ ಬ್ರಹ್ಮನಿಗೆ ಸುತ್ತಮುತ್ತ ಇರುವ ಜನರೂ ಸಹ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಈ ಬ್ರಹ್ಮನ ವೈಶಿಷ್ಟ್ಯವೇನೆಂದರೆ, ತನ್ನ ಭಕ್ತರ ಮನೆ ಜಾನುವಾರು ಮತ್ತು ಮಕ್ಕಳ ರಕ್ಷಣೆ. ಯಾವುದೇ ಭಕ್ತನಿಂದ ಏನಾದರೂ ಲೋಪ ಕಂಡಾಕ್ಷಣ ಮೊದಲನೇ ಸೂಚನೆ ಅವನ ಮನೆಯಲ್ಲಿನ ಚಿಕ್ಕಮಕ್ಕಳ ರೋದನ, ಕಿರಿಕಿರಿ, ಅನಾರೋಗ್ಯ. ಇದರಿಂದಲೂ ಎಚ್ಚೆತ್ತುಕೊಳ್ಳದಿದ್ದರೆ, ಆ ಭಕ್ತನ ಮನೆ ಜಾನುವಾರು, ಹಾಲಿನೊಂದಿಗೆ ರಕ್ತ ಕರೆಯಬೇಕಾದ ಶಿಕ್ಷೆ ಇರುತ್ತದೆ. ಈ ಶಿಕ್ಷೆಯ ದೃಷ್ಟಾಂತ ಈಗಲೂ ಇದ್ದು, ಈ ಲೇಖಕ ತನ್ನ ಮನೆಯಲ್ಲೇ ರಕ್ತಯುಕ್ತವಾದ ಎಮ್ಮೆಹಾಲನ್ನು ತಾನೇ ಖುದ್ದು ಕರೆಸಿ ತಂದ ಅನುಭವವಿದೆ. ಇದರ ಪರಿಹಾರಕ್ಕಾಗಿ ಬ್ರಹ್ಮನಿಗೆ ಮೊಸರನ್ನ ಮಾಡಿದರೆ ತೀರಿತು, ಅಪರಾಧ ಮುಕ್ತವಾಗುವುದು ಲೇಖಕರಂತೆ ಅನೇಕರ ಅನುಭವವಾಗಿದೆ.

ಇಲ್ಲಿ ಲೇಖಕ ಸ್ವತಃ ನೋಡಿದ ಇನ್ನೊಂದು ದೃಷ್ಟಾಂತ ಸಾಕ್ಷಿಯೂ ಇದೆ. ಲೇಖಕನ ಸ್ನೇಹಿತರೊಬ್ಬರು ಮನೆ ಸಮೀಪದಲ್ಲಿರುವ ಒಬ್ಬ ಕೃಷಿಗಾರರು. ಅವರ ಮನೆಯಲ್ಲಿ ನಾಲ್ಕೈದು ಎಮ್ಮೆಗಳು ಮತ್ತು ಸಾಕಷ್ಟು ಹಸುಗಳು ಕರೆಯುತ್ತಿದ್ದು, ಪ್ರತಿದಿನ ಹಾಲು ಮಾರಾಟ ಮಾಡುತ್ತಿದ್ದರು. ಒಂದು ದಿನ ಕರೆದು ತಂದಿರಿಸಿದ ಹಾಲೆಲ್ಲಾ ಲೋಳೆ ಲೋಳೆ ದ್ರವ. ಇದು ಏಕೆ ಹೀಗೆಂದು ಯಾರಿಗೂ ಹೊಳೆಯಲಿಲ್ಲ. ಈ ಮುಂಚೆ ಇವರಿಂದ ಹಾಲು ಪಡೆದವರು ಯಾವ ತಕರಾರಿಲ್ಲದೆ ಇದ್ದವರು, ಅವರೂ ಸಹಾ ತಾವು ಪಡೆದ ಹಾಲು ಲೋಳೆಯಾಗುತ್ತಿರುವ ಬಗ್ಗೆ ಪುಕಾರು ಮಾಡಿದರು. ಈ ರೀತಿ ಪ್ರತಿದಿನ ಅಂದಾಜು ೨೫ ಲೀ. ಹಾಲು ಹಾಳಾಗಲು ಶುರುವಾಯಿತು. ಜಾನುವಾರು ಡಾಕ್ಟರುಗಳು ಬಂದರು. ಔಷಧಿ ಇಂಜೆಕ್ಷನ್ ಮುಂತಾದವು ನಡೆದವು. ಹಾಲು ಸರಿ ಆಗಲೇ ಇಲ್ಲ. ನಂತರ ಗ್ರಾಮೀಣ ವಾಡಿಕೆಯಂತೆ ಜ್ಯೋತಿಷಿಗಳು, ಮಂತ್ರವಾದಿಗಳಲ್ಲಿ ಶಕುನ, ಪ್ರಶ್ನೆಗಳೆಲ್ಲಾ ನಡೆದವು. ಯಾವ ಪರಿಹಾರಕ್ಕೂ ವ್ಯಾಧಿ ಜಗ್ಗಲಿಲ್ಲ. ಹೀಗಿರುವಾಗ

ಅಕಸ್ಮಾತ್ ಇವರ ಮನೆಗೊಬ್ಬರು ದೂರದ ನೆಂಟರ ಆಗಮನವಾಯಿತು. ಅವರು ಇಂತಹ ಗಹನ ವಿಷಯದಲ್ಲಿ ಪರಿಣಿತರು. ಅವರು ಕವಡೆ ಹಾಕಿ ನೋಡಿ ಜಮೀನು ಮೇಲುಗಡೆ ಬಲವಾದ ಶಕ್ತಿಯೊಂದಿದ್ದು, ಸದ್ರಿ ಶಕ್ತಿ ಜಮೀನು ಅಭಿವೃದ್ಧಿ ಇಲ್ಲದಾಗ ಸುಮ್ಮನಿದ್ದಿತೆಂದೂ ಈಗ ಜಮೀನು ಅಭಿವೃದ್ಧಿಯಾಗಿ ಸಂಪತ್ತುಂಟಾಗಿದ್ದರೂ ತನ್ನ ಬಗ್ಗೆ ಇನ್ನೂ ತಾತ್ಸಾರ ಮಾಡಿ ಸೇವೆ ಸಲ್ಲಿಸದಿರುವುದರಿಂದ ಶಕ್ತಿ ದೇವತೆ ಮುನಿಸಿಕೊಂಡಿದ್ದಾಳೆ ಎಂದು ತಿಳಿಸುತ್ತಾ, ಶಕ್ತಿದೇವತೆ ಇರುವ ಸ್ಥಳ ಸಹಾ ತೋರಿಸಿದರಂತೆ. ಅದರಂತೆಯೇ ಅವರ ಮಾತಿಗನುಸಾರವಾಗಿ ಹೋಮ, ಹವನ, ಪ್ರಾರ್ಥನೆ, ಪೂಜೆಯಾದ ಮಾರನೇ ದಿನವೇ ಹಾಲು ಯಥಾಸ್ಥಿತಿಗೆ ಬಂದಿತು. ಈ ಘಟನೆಯನ್ನು ಖುದ್ದು ಲೇಖಕ ವೀಕ್ಷಿಸಿ ಅನುಭವ ಪಡೆದಿರುವುದಾಗಿದೆ. ಇಂತಹ ಶಕ್ತಿ ಸಂಬಂಧವಾದ ದೈವ-ದೇವತೆಗಳ ಪ್ರಭಾವ ಹೌದೋ ಸುಳ್ಳೋ ಅಥವಾ ನಂಬಿಕೆಯೋ? ಅಂತೂ ಈಗಲೂ ಇಂತಹ ಶಕ್ತಿಗಳುಂಟೆಂದು ಮಲೆನಾಡಿನಲ್ಲಿ ಈಗಲೂ ಹರಕೆ, ಪೂಜೆಗಳಂತೂ ನಡೆಯುತ್ತಿರುವುದು ವಾಸ್ತವ.


ಮೇಲೆ ಬರೆದ ಬುತ್ತಿ ಬ್ರಹ್ಮನ ಸಂಬಂಧ ನಡೆದ ಇನ್ನೊಂದು ಘಟನೆಯನ್ನು ಇಲ್ಲಿ ಉಲ್ಲೇಖಿಸುತ್ತೇನೆ: ಈ ಬುತ್ತಿ ಬ್ರಹ್ಮನಿಗೆ ಬನವಿದ್ದು ನೆರಳಿಗಾಗಿ ಕೆಲವು ಮರಗಳಿರುತ್ತವೆ. ಈಗ್ಯೆ ಕೆಲವು ವರ್ಷಗಳ ಹಿಂದೆ ಯಾವನೋ ಒಬ್ಬ ಅನಾಮಧೇಯ ಈ ಮರಗಳ ಪೈಕಿ ಒಂದು ಮರದ ಹೆರೆಗಳನ್ನು ಕಡಿದು ಸೌದೆ ಮಾಡಿದ. ನಂತರ ಮರ ಕಟ್ಟಿದವನು ನಾಪತ್ತೆ! ಈ ಬ್ರಹ್ಮನ ಬನದ ಆಸುಪಾಸು ವಾಸವಿದ್ದವರ ಪೈಕಿ ಒಬ್ಬರು ಈ ಸೌದೆಯಲ್ಲಿ ಕೆಲವನ್ನು ಉರುವಲಿಗೆಂದು ತಂದು ಮನೆ ಹತ್ತಿರ ಹಾಕಿಕೊಂಡರು. ಮಾರನೇ ದಿವಸ ಬೆಳಿಗ್ಗೆ ಮುಂಚೆ ಮನೆ ಮುಂದಿನ ಹೆಬ್ಬಾಗಿಲನ್ನು ತೆರೆಯುವುದರೊಳಗಾಗಿ, ಎಂದೂ ಯಾರೂ ಕಂಡಿರದ ಕಾಳಿಂಗ ಸರ್ಪವೊಂದು ಇವರ ಮನೆಯೊಳಕ್ಕೆ ನುಗ್ಗಿತು. ಒಳಗಿನವರು ನೋಡಿ ಗಾಬರಿಯಿಂದ ಕೂಗಾಡಿದ ಗಲಾಟೆಗೆ ಈ ಸರ್ಪ ಒಂದು ಕೋಣೆಗೆ ನುಗ್ಗಿತು. ಅಂತೂ ಹೇಗೋ ಮಾಡಿ ಸರ್ಪವನ್ನು ಕೊಲ್ಲದೇ ಹೊರಹಾಕಿದರು. ಪಾಪ, ಮನೆಯವರು ೬ ತಿಂಗಳು ಮನೆ ಖಾಲಿ ಮಾಡಿ, ಬೇರೆ ಕಡೆ ವಾಸ ಮಾಡಿ, ನಂತರ ಇದು ಅನಿಷ್ಟವೆಂದು ಬಗೆದು ಹೋಮ- ಹವನ ನಡೆಸಿ, ಪುನಃ ಮನೆ ಪ್ರವೇಶ ಮಾಡಿದರು. ಇದು ಬ್ರಹ್ಮನದೇ ಕಾಟವೆಂದೂ, ಸೌದೆ ತಂದಿದ್ದೇ ಅಪರಾಧವೆಂದೂ ಹೇಳುತ್ತಲಿದ್ದವರನ್ನು ಕೇಳಿದವರು ತಲೆ ಹಾಕುತ್ತ ಹೌದೌದೆಂದು ಸುಮ್ಮನೆ ಸೂಚಿಸುತ್ತಿದ್ದರು. ಶಕ್ತಿಯೋ? ಪ್ರಭಾವೋ? ಹೌದೋ? ಸುಳ್ಳೋ? ನಂಬಿಕೆಯೋ? ಈ ಘಟನೆ ನಡೆದದ್ದು ಮಾತ್ರ ಸತ್ಯ. ಆ ನಂತರ ಈವರೆಗೂ ಕಾಳಿಂಗಸರ್ಪ ಕಂಡಿಲ್ಲ. ಹಿಂದೆ ಕಾಳಿಂಗಸರ್ಪ ಇದ್ದದ್ದನ್ನು ಕೇಳಿದವರೂ ನೋಡಿದವರೂ ಇಲ್ಲ.

**ಮಲೆನಾಡಿನ ಶುಭಾಶುಭ ಶಕುನಗಳು, ವಾಮ್ಯ-ವಾಗತ್ಯಗಳು, ಅನಿಷ್ಟ ಪರಿಹಾರಗಳು:** ಮಲೆನಾಡಿನ ಜನಜೀವನದ ಅಂದಿನ ದಿನಗಳಲ್ಲಿ ನಿತ್ಯ ಬದುಕಿನಲ್ಲಿ ಕೆಲವು ವಾಮ್ಯ- ವಾಗತ್ಯ ವಿಷಯಗಳು (ನಿಷಿದ್ಧಗಳು) ಮತ್ತು ಶುಭಾಶುಭ ಶಕುನಗಳು ಚಾಲ್ತಿಯಲ್ಲಿದ್ದು ಅದರಂತೆ ನಂಬಿ ಬಾಳುತ್ತಾ, ಆಚರಿಸುತ್ತಾ ಬರುತ್ತಿದ್ದರು. ಈ ಆಚರಣೆಗಳು ಮತ್ತು ನಂಬಿಕೆಗಳು ಮೌಢ್ಯವೋ ವಾಸ್ತವವೋ ಎಂಬ ತರ್ಕಕ್ಕೆಡೆ ಮಾಡದೆ ಸಹನೆಯಿಂದ ಪಾಲನೆ ಮಾಡುತ್ತಾ ಬದುಕು ಮಾಡಿಕೊಂಡು ಬಂದರು. ವಾಮ್ಯಗಳಾಯಿತೆಂದರೆ ಅಲ್ಲಲ್ಲೇ ಕೆಲವು ಪರಿಹಾರ ಮಾಡಿಕೊಂಡು, ಸಮಜಾಯಿಷಿ - ಸಮಾಧಾನ ಮಾಡಿಕೊಳ್ಳುತ್ತಿದ್ದರು.

ಪ್ರಾರಂಭವೆಂಬಂತೆ ಭದ್ರಾಕರಣದ (ಕ್ಷೌರ, ಚೌರ, ಆಯುಷ್ಕರ್ಮ) ಮೈಲಿಗೆಯನ್ನೂ ಶುದ್ಧೀಕರಣವನ್ನೂ ತಿಳಿಸುತ್ತೇನೆ. ವಾರಗಳಲ್ಲಿ ಮಂಗಳವಾರ, ಶನಿವಾರ ಕ್ಷೌರಕ್ಕೆ ನಿಷಿದ್ಧ. ಮಧ್ಯಾಹ್ನ ೧೨ ಘಂಟೆ ನಂತರ ಕ್ಷೌರ ನಿಷಿದ್ಧ. ವಾಸದ ಮನೆ ಸೂರಿನೊಳಗೆ ಚೌರ ಮಾಡಿಸಿಕೊಳ್ಳುವಂತಿಲ್ಲ, ಅನಿವಾರ್ಯತೆಯ ಹೊರತು. ಮನೆಯ ಅಂಗಳ ಅಥವಾ ಮನೆಯ ಹೊರಭಾಗದ ಜಾಗದಲ್ಲಿ ಈ ಕರ್ಮಕ್ಕೆ ಅವಕಾಶ. ವಾಸದ ಮನೆ ವಾಸ್ತು ಮಿತಿಯೊಳಗಂತೂ ಯಾವತ್ತೂ ನಿಷಿದ್ಧವಿತ್ತು. ಚೌರವಾದ ನಂತರ ಚೌರ ಮಾಡಿದ ಜಾಗಕ್ಕೆ ಗೋಮೆ ಹಾಕಿ ಸಾರಿಸಬೇಕಿತ್ತು. ಶುದ್ಧವಾದ ಹೊರತು ಸ್ನಾನದ ಹಂಡೆ ಮುಟ್ಟುವಂತಿಲ್ಲ. ಶುದ್ಧ ಸ್ನಾನಕ್ಕೆ ಯಾರಾದರೂ ನೀರು ಹಂಡೆಯಿಂದ ತೆಗೆದು ಹನಿಸಬೇಕು. ಗೋಮೆ, ತುಳಸಿಕಟ್ಟೆಯ ಮೃತ್ತಿಕೆ ನೀರಿನಲ್ಲಿ ಕದರಿ ಸ್ನಾನ. ತೊಟ್ಟ ಬಟ್ಟೆ, ಮೈಯ್ಯೆಲ್ಲಾ ಸ್ನಾನದ ನೀರಿನಿಂದ ಒದ್ದೆಯಾದ ನಂತರವೇ ಶುದ್ಧವಾದುದರ ಅರ್ಥ. ಈ ರೀತಿ ಭದ್ರಾಕರಣದ ಶುದ್ಧಿಯ ವೈಶಿಷ್ಟ್ಯವಿರುತ್ತಿತ್ತು. ಈಗ ಇದನ್ನು ಹೇಳಿದರೆ, ನಾಗರಿಕ ಜಗತ್ತು ನಗಬಹುದು. ಆದರೆ ಇಂತಹ ಆಚರಣೆ ಇದ್ದುದು ಸತ್ಯ. ಹಳ್ಳಿ ಮನೆಗಳಲ್ಲಿ ಈಗಲೂ ಇರಬಹುದೇನೋ? ಗೊತ್ತಿಲ್ಲ. ಅಮಾವಾಸ್ಯೆ, ಹುಣ್ಣಿಮೆ ತಿಥಿಗಳು ಸಹಾ ಭದ್ರಾಕರಣಕ್ಕೆ ನಿಷಿದ್ಧವೆಂದು ಹೇಳುತ್ತಿದ್ದರು.

**(ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು)**

# ರಾಜಾರಾಮನಿಗೆ ಹಿಂದೆಂದು ಹೀಗಾಗಿರಲಿಲ್ಲ



(ಉಮಾ ರಾವ್ ಕಥೆಗಳು) ✍ **ಉಮಾ ರಾವ್**

ಹೌದು, ರಾಜಾರಾಮನಿಗೆ ಹಿಂದೆಂದೂ ಹೀಗಾಗಿರಲಿಲ್ಲ. ಹಾಗೆ ನೋಡಿದರೆ ಅವನ 38 ವರ್ಷಗಳ ಬದುಕಿನಲ್ಲಿ ಇನ್ಯಾರಿಗೂ ಹೀಗಾಗಿದ್ದನ್ನು ಅವನು ನೋಡಿಯೂ ಇರಲಿಲ್ಲ ಕೇಳಿಯೂ ಇರಲಿಲ್ಲ.
ರಾಜರಾಮ ಎಂದಿನಂತೆ ಇಂದು ಬೆಳಿಗ್ಗೆಯೂ ಎದ್ದು ಹಲ್ಲುಜ್ಜಿ, ವಿವಿಧ ಭಾರತಿ ತಿರುಗಿಸಿ, ಕಿಟಕಿಯ ಸರಳುಗಳಿಗೆ ಮಣುಕು ಕನ್ನಡ ಸಿಕ್ಕಿಸಿ ಕ್ಷೌರ ಮಾಡಿಕೊಂಡಿದ್ದ. ನಂತರ ಸ್ನಾನ ಮುಗಿಸಿ ಕಾಫಿ ಕುಡಿಯುತ್ತಾ ಅಂದಿನ ಪೇಪರ್ ಹಿಡಿದು ಮೊದಲು ಕ್ರಿಕೆಟ್ ನಂತರ ಲೋಕಲ್ ಕೊಲೆ, ದರೋಡೆ, ಮನೋರಂಜನೆ ಓದಿ ಕೊನೆಗೆ ಮೊದಲ ಪೇಜಿನ ಮೇಲೆ ಅವಸರದಲ್ಲಿ ಕಣ್ಣೋಡಿಸಿ ಎಸೆದಿದ್ದ. ಅಷ್ಟು ಹೊತ್ತಿಗೆ ಸುಗುಣ ಮಗನನ್ನು ಎಬ್ಬಿಸಿ ತಿಂಡಿ ಕೊಟ್ಟು ತಯಾರು ಮಾಡಿ "ಹುಷಾರು" ಎಂದು ಹೇಳಿ ಟ್ಯೂಷನ್ ಗೆ ಕಳಿಸಿದಾಗ, ಎಂಥ ಹುಷಾರು ಎಂದು ತಲೆ ಕೆರೆದುಕೊಂಡಿದ್ದ. ಅವಳು ಸ್ನಾನ ಮುಗಿಸಿ ದೇವರಿಗೆ ದೀಪ ಹಚ್ಚಿ ಎಂದಿಗಿಂತ ಹೆಚ್ಚು ನಮಸ್ಕಾರ ಹಾಕಿದಾಗ ತನ್ನ ಪ್ರಮೋಶನ್, ಮಗನ ಫಸ್ಟ್ ರ್‍ಯಾಂಕ್ ಗಾಗಿ ಪುಸಲಾಯಿಸುತ್ತಿರಬೇಕು ಎಂದು ಮನಸ್ಸಿನಲ್ಲಿ ನಕ್ಕಿದ್ದ. ಬೇಗ ತಿಂಡಿ ಕೆಲಸ ಮುಗಿಸಿ ಇವನು ಹೊರಗೆ ಹೋಗಲು ತಯಾರಾಗಿದ್ದಾನೆ ಎಂದು ಅರ್ಥ ಮಾಡಿಕೊಂಡು ತಿಂಡಿ ತಿನ್ನುತ್ತೀರಾ ಎಂದು ಕೇಳಿದಾಗ ಹೂಗುಟ್ಟಿ ತಿಂದು ಮುಗಿಸಿ ಹೊರ ಬಿದ್ದಿದ್ದ.
ಚಪ್ಪಲಿ ಮೆಟ್ಟಿಕೊಳ್ಳುತ್ತಿದ್ದಾಗ ಧುತ್ತನೆ ಎದುರಾಗಿತ್ತು ಈ ಪ್ರಶ್ನೆ. ನಾನೆಲ್ಲಿಗೆ ಹೊರಟಿದ್ದೆ? ಮೊದಲ ಬಾರಿ ಈ ಪ್ರಶ್ನೆ ಎದುರಾದಾಗ ಅದು ಅಂತ ಯಕ್ಷಪ್ರಶ್ನೆಯಾಗಿ ಮೂಡಲಿಲ್ಲ ಅಥವಾ ಮುಂದೆ ಬಿಡದೆ ಕಾಡಬಹುದೆಂದು ಅನಿಸಲಿಲ್ಲ. "ಛೀ....ಎಂಥ ಮರೆವು" ಎಂದು ಮನಸ್ಸಿನಲ್ಲಿ ಗೊಣಗಿಕೊಂಡ ರಾಜರಾಮ.

"ವಯಸ್ಸು ಆಗ್ತಾ ಬಂತೇ.... ಎಂಥಾ ವಯಸ್ಸು.... 38 ವಯಸ್ಸೆ? ಪರದೇಶಗಳಲ್ಲಿ ಜನ 70 - 80ಕ್ಕೆ ಮದುವೆ ಮಾಡಿಕೊಳ್ಳುತ್ತಾರೆ. ಪರ್ವತಗಳನ್ನು ಹತ್ತುತ್ತಾರೆ... ಕಾರ್ ರೇಸ್ ಮಾಡುತ್ತಾರೆ... ಅಂಥಾದ್ದು 38ಕ್ಕೆ ಮರೆವು ಬರುವ ವಯಸ್ಸೆ? ಖಂಡಿತ ಅಲ್ಲ ಆದರೆ ತಾನೊಂದು ಹೊರಟಿದ್ದು ಎಲ್ಲಿಗೆ?"

ರಾಜಾರಾಮ ನಿಧಾನವಾಗಿ ತನ್ನತ್ತಲೆ ತಾನು ನೋಡಿಕೊಂಡ. ತೊಟ್ಟಿರುವುದು ಸಾಧಾರಣವಾದ ಬುಶ್ ಶರ್ಟ್ ಪ್ಯಾಂಟ್. ಇವತ್ತು ಭಾನುವಾರ ಆಫೀಸಿಗಂತೂ ಅಲ್ಲ. ಹಾಗಾದರೆ ಹೇರ್ ಕಟಿಂಗ್ಗ್ ಗೇನಾದರೂ ಹೊರಟಿದ್ದೇನೆ? ಎಂಥ ಮೂರ್ಖತನ... ಬೆಳಗಾಗೆದ್ದು ಕ್ಷೌರ, ಸ್ನಾನಕ್ಕೆ ಮುಂಚೆಯೇ ಹೋಗುವ ಅಭ್ಯಾಸ ಚಿಕ್ಕಂದಿನಿಂದ ಅಂಟಿಕೊಂಡುಬಿಟ್ಟಿದೆ. ಇನ್ನು ಯಾರದಾದರೂ ಮನೆಗೆ? ಹೋದರೂ ತಾನು ಹೋಗುವುದು......ರಮೇಶನ ಮನೆ. ಆಫೀಸಿನಲ್ಲಿ ದಿನಾ ನೋಡಿದರೂ ಏನಾದರೂ ಆಫೀಸಿನ ಖಾಸಾ ವಿಷಯ ರಾಜಕೀಯ ಇದ್ದಾಗ ತನ್ನದೇ ಡಿಪಾರ್ಟ್ಮೆಂಟ್ನಲ್ಲಿದ್ದ ಆತನ ಮನೆಗೆ ಹೋಗಿ ಪಿಸ ಪಿಸ ಮಾಡುವುದುಂಟು. ಆಗ ಅವನ ಹೆಂಡತಿ ಚಕ್ಕುಲಿ, ಕಾಫಿ ಕೊಟ್ಟು "ಮನೇಲೆಲ್ಲ ಚೆನ್ನಾಗಿದ್ದಾರ? ಮಗ ಯಾವ ಕ್ಲಾಸು...." ಇತ್ಯಾದಿ ಕೇಳುವುದುಂಟು. ಆದರೆ ರಮೇಶ ರಜಾ ತೆಗೆದುಕೊಂಡು ತಂಗಿ ಮದುವೆಗಾಗಿ ಮೈಸೂರಿಗೆ ಹೋಗಿದ್ದಾನೆ. ಇನ್ನೂ ಭಾವ ಮೈದುನ ಅಂಬಿಯ ಮನೆ. ಸುಗುಣಾಳ ಬಲವಂತದಿಂದ ಪ್ರತಿ ಯುಗಾದಿ ಶುಭಾಂತ ನೋಡಿ ಹೋಗೋದು ಬಿಟ್ಟರೆ ಅವನ ಮನೆಗೆ ಹೋಗುವುದೆಂದರೆ ಎಂದೂ ಆಗದು. ಇಲ್ಲದಿದ್ದರೆ ರಾಮ ಶಾಸ್ತ್ರಿಗಳ ಮನೆ. ಹಳೆಯ ಮಾಸ್ತರು... ಬಾಲ್ಯದಿಂದಲೂ ಎಂತದೋ ಮೋಹ. ವಯಸ್ಸು ವಾತ್ಸಲ್ಯಕ್ಕೆ ಕಟ್ಟು ಬಿದ್ದು ತಾನು ಆಗಾಗ ಹೋಗುವುದುಂಟು. ಆದರೆ ಹೋದ ವಾರವೇ ಅವರನ್ನು ನೋಡಿಕೊಂಡು ಬಂದಾಗಿದೆ. ಮತ್ತೆ ಚೀನಿ ಏನಾದರೂ ಬೇಕು ಅಂದಿದ್ದನೆ? ಅಂಗಡಿಗಳಿಗೆಲ್ಲ ರಜಾ ಇರುವಾಗ ಏನಾದರೂ ತರಲು ಹೊರಟಿರುವುದು ಹೇಗೆ ಸಾಧ್ಯ? ಇನ್ನು ಏನಾದರೂ ಸ್ಪೆಷಲ್ ಪ್ರೋಗ್ರಾಮ್... ಹಾಗೆ ತನ್ನನ್ನು ಕರೆಯುವುದಾದರೂ ಯಾರು? ಆದರೆ ಏನಾದರೂ ಸ್ಪೆಷಲ್ ಇದ್ದರೂ ತಾನು ಅದಕ್ಕಾಗಿಯೇ ಇಟ್ಟಿದ್ದ ವಿಮಲ್ ಪ್ಯಾಂಟ್ ಶರ್ಟ್ ಧರಿಸುವ ಅಭ್ಯಾಸ. ಓನ್ಲಿ ವಿಮಲ್... ಓನ್ಲಿ ವಿಮಲ್... ವಿ ರಿಚಾರ್ಡ್ಸ್, ರವಿ ಶಾಸ್ತ್ರಿ.... ಛಿ, ತಲೆ ಎಲ್ಲೆಲ್ಲೂ ಓಡುತ್ತಿದೆ.... ಇವತ್ತಂತೂ ಆ ಓನ್ಲಿ ವಿಮಲ್ ಬಟ್ಟೆ ಧರಿಸಿಲಿಲ್ಲವಲ್ಲ. ಹಾಗಾದರೆ ತಾನು ಹೊರಟಿದ್ದು ಎಲ್ಲಿಗೆ?

ಏಕೋ ಈ ಪ್ರಶ್ನೆ ಕಾಡಿದಷ್ಟು ತಲೆ ಹೆಚ್ಚು ಬಿಸಿಯಾಗ ತೊಡಗಿತು. ಹಾಂ ಸುಗುಣಾನ ಕೇಳಿದರೆ? ಒಂದೊಂದು ಸಲ ಎಷ್ಟೋ ಸಮಸ್ಯೆಗಳಿಗೆ ಅವಳಿಂದ ಚಕ್ಕನ ಉತ್ತರ ಸಿಗುವುದು ಉಂಟು. ಅವಳೇನೆನ್ನಬಹುದು? "ಮಾತು ಮಾತಿಗೂ ಹೆಂಗಸರಿಗೆ ಬುದ್ದಿ ಕಡಿಮೆ ಎಂದು ಅಣಕಿಸುತ್ತಿದ್ದೀರಲ್ಲ..... ಈಗ?ಎಂದು ಮೂದಲಿಸಿದರೆ? "ಅಲ್ಲಾ ಹೀಗೆ ಅಲಂಕಾರ ಮಾಡಿಕೊಂಡು ತಯಾರಾಗಿ ಎಲ್ಲಿಗೆ ಹೊರಟಿದ್ದೇನೆಂದು ಮರೆತವರನ್ನು ಎಲ್ಲೂ ನೋಡಿಲ್ಲಪ್ಪ" ಎಂದು ಬಿದ್ದು ಬಿದ್ದು ನಕ್ಕರೆ? "ನೋಡ್ತಾ್ಯ ಚೀನಿ ನಿಮ್ಮಪ್ಪಂಗೆ ಎಂತ ಮರೆವು ಸಿನಿಮಾ ಸ್ಟಾರ್ ತರ ಹೇರ್ ಕಟ್ ಮಾಡಿಸಿಕೊಂಡರೆ ವಯಸ್ಸು ಕೇಳುತ್ತಾ?" ಎಂದು ಅಣಗಿಸಿದರೆ? ಇದೇನ್ರಿ ಗ್ರಹಚಾರ ನಿಮಗೂ ಚೇಚು- ಚಿಕ್ಕಪ್ಪನ ಥರ..... ಅಯ್ಯೋ ಇಂಥವೆಲ್ಲ ಹೆರಿಡಿಟರಿ ಅಂತಾರೆ. ನಿಮಗೇನಾದರೂ ಹೋಗೋಣ ನೋಡಿರಿ ಎಂದು ಮುಸಿಮುಸಿ ಮಾಡಿದರೆ?

ಹಾಳಾಯಿತು ಅವಳೇನಾದರೂ ಅಂದುಕೊಳ್ಳಲಿ ಈಗ ಸದ್ಯಕ್ಕೆ ತನ್ನ ಪ್ರಶ್ನೆಗೆ ಉತ್ತರ ಸಿಕ್ಕಿದರೆ ಸಾಕು. ಗಂಟಲು ಸರಿ ಮಾಡಿಕೊಂಡ ರಾಜರಾಮ. "ಸುಗುಣ ನೋಡು ಎಂಥ ತಮಾಷೆ ನೀನು ನಂಗೆ ಸ್ವಲ್ಪ ಸಹಾಯ ಮಾಡಬೇಕು. ಅಲ್ಲಾ.... ನಂಗೆ ಎಲ್ಲಿಗೆ ಹೊರಟಿದ್ದೇನೆ ಎಂದು ಮರೆತು ಹೋಗಿದೆ ಇಷ್ಟೆಲ್ಲ ರೆಡಿಯಾದ ಮೇಲೆ...!ನಿಂತಲ್ಲಿಂದಲೇ ತಿರುಗಿ ತೊಳೆಯುತ್ತಿದ್ದ ಪಾತ್ರೆ ರಾಶಿಗೆ ಬೆನ್ನು ಮಾಡಿ ಹುಬ್ಬೆತ್ತಿ ನೋಡಿದಳು. ನೀವೆಂದಾದರೂ ಹೆಂಡತಿ ಅನ್ನಿಸಿಕೊಂಡವಳಿಗೆ ನಾನೆಂಥ ಕಡೆ ಹೋಗ್ತೀನಿ, ಇಷ್ಟು ಹೊತ್ತಿಗೆ ವಾಪಸ್ಸು ಬರ್ತೀನಿ ಅಂತ ಹೇಳಿ ಹೋಗುವ ಅಭ್ಯಾಸ ಇಟ್ಟುಕೊಂಡಿದ್ದೀರಾ ಇಷ್ಟೇ ಉತ್ತರ.

ಇನ್ನು ಇವಳಿಂದ ಏನು ಪ್ರಯೋಜನವಿಲ್ಲವೆಂದು ಖಾತ್ರಿಯಾಯಿತು. ಈಗೇನು ಮಾಡೋದು? ಸುಮ್ಮನೆ ಮನೆಯಿಂದ ಹೊರಟುಬಿಟ್ಟರೆ? ಹೊರಟ ಮೇಲೆ ನೆನಪು ಬಂದರೂ ಬರಬಹುದು. ಮನೆಯಿಂದ ಹೊರಗೆ ಹೆಜ್ಜೆ ಹಾಕಿದ ರಾಜರಾಮ. ಎಡಗಡೆ ತಿರುಗುವುದುದೋ, ಬಲಗಡೆಯೋ? ಬಲಗಡೆ ತಿರುಗಿದರೆ ಸೀದಾ ಆಸ್ಪತ್ರೆ ಪಕ್ಕದಲ್ಲಿ ಹಟ್ಟಿ, ಕೆರೆ ಏರಿ, ಎಡಗಡೆ ತಿರುಗುವುದೇ ವಾಸಿ. ಸ್ನೇಹಿತರ ಮನೆಗಳು ಆಫೀಸು ದೇವಸ್ಥಾನ ಮಾರ್ಕೆಟಿಂಗ್, ಊರಾಚೆ ಬೇರೆ ಬೇರೆ ಊರುಗಳಿಗೆ ಹೋಗುವ ಹೆದ್ದಾರಿಗಳು. ನಾನು ಸಾಮಾನ್ಯವಾಗಿ ಹೋಗುವ ಅನೇಕ ಸ್ಥಳಗಳಿಗೆ ಎಡಗಡೆಯೇ ತಿರುಗಬೇಕು. ನಿಧಾನವಾಗಿ ಅತ್ತ ನಡೆದ ರಾಜರಾಮ.

ಬಿಸಿಲು ತಲೆಯಲ್ಲ ಗಜಿಬಿಜಿ ದಾರಿ ಸಾಗಿದಂತೆ ಒಬ್ಬೊಬ್ಬರು ಪರಿಚಯದವರು ಎದುರಾಗ ತೊಡಗಿದರು. ಸ್ವಲ್ಪ ದೂರ ನಡೆಯುವುದರಲ್ಲಿ ಪಕ್ಕದಲ್ಲಿಯಿಂದ ಬಾಲ್ಯದ ಸ್ನೇಹಿತ ಗಂಗಾಧರ ಕಾಣಿಸಿಕೊಂಡ. "ನಮಸ್ಕಾರ" ಎಂದ. "ಬೆಳಗಾಗೆದ್ದು ಎಲ್ಲಿಗಪ್ಪ" ಎಂದ. "ನೀನು ಎಲ್ಲಿಗೋ ಹೊರಟಿರುವಂತಿದೆ" ರಾಜರಾಮ. ನಗೆಪಟಲ್ ಆಗುವುದನ್ನು ತಪ್ಪಿಸಿಕೊಳ್ಳಲು "ಅಯ್ಯೋ ನಿಮ್ಮ ಮನೆಗೆ ಹೊರಟಿದ್ದೇನೆ, ತುಂಬಾ ದಿನವಾಗಿತ್ತು ನಿನ್ನ ನೋಡಿ ನೀನೇ ಅವಸರದಲ್ಲಿ ಎಲ್ಲಿಗೂ ಹೊರಟಿರುವಂತಿದೆ, ಇರಲಿ ಬಿಡು ಇನ್ನೊಂದಿನ ಬರ್ತೀನಿ, ಇವತ್ತು ಶೇಷಣ್ಣನನ್ನು ನೋಡಿಕೊಂಡು ಹೋಗ್ತೀನಿ ಇಷ್ಟು ದೂರ ಬಂದಾಗಿದೆ' ಮುಂದೆ ನಡೆದ ಗಂಗಾಧರ.

"ಸಧ್ಯ ಬಚಾವಾದೆ" ಎಂದುಕೊಳ್ಳುವಷ್ಟರಲ್ಲಿ ಆ ಚಿಟ್ ಫಂಡ್ ಏಜೆಂಟ್. "ನಮಸ್ಕಾರ ರಾಜಾರಾಮರಾಯರಿಗೆ.... ಏನು ಇಷ್ಟು ದೂರ...? "ಹೀಗೇ... ಭಾನುವಾರ...." ತೊದಲಿದ ರಾಜಾರಾಮ. "ಓ... ಭಾನುವಾರ ಮನೇಲಿ ಬೈಸಿಕೊಳ್ಳುವುದರ ಬದಲು ಒಂದು ಮೂನ್ ಲೈಟ್... ಅಲ್ಲ. ಸನ್ ಲೈಟ್ ವಾಕ್ ಹೋಗಿ ಬರುವುದು ವಾಸೀಂತಾನಾ.... ಬುದ್ದಿವಂತರು ಸ್ವಾಮಿ..."

ಯಾವಾಗಲೂ ತಲೆಹರಟೆ.

"ಅಂದಾಗೆ ಯೋಚನೆ ಮಾಡಿದೀರಾ ಸ್ವಾಮಿ.. ಈ ಚಿಟ್ ಫಂಡ್ ಬಗ್ಗೆ. ಒಳ್ಳೆ ಇನ್ ವೆಸ್ಟ ಮೆಂಟ್ ನೋಡಿ...."

ಇವನಿಂದ ತಪ್ಪಿಸಿಕೊಳ್ಳುವ ಬಗೆ ಹೇಗೆ? "ಮುಂದಿನ ವಾರ ಮನೆಗೆ ಬನ್ನಿ.... ಮಾತನಾಡೋಣ.." ಎಂದ ರಾಜರಾಮ. ಸದ್ಯ ತೊಲಗಿತು ಪೀಡೆ ಎಂದುಕೊಳ್ಳುತ್ತಾ ಕಾಲು ಹಾಕಿದಂತೆ ಅರಿವಾಯಿತು. ತರಕಾರಿ ಮಾರ್ಕೆಟ್ಟು. ಅಂಗಡಿ ಬೀದಿ ದಾಟಿ ಊರಿನಾಚೆಯ ಎಕ್ಸ್ಟೆನ್ಸನ್ ನಲ್ಲಿ ನಡೆಯುತ್ತಿದ್ದೇನೆಂದು . ಮನೆಯ ಮುಂದೆ ಗಡಿ ತುಂಬಾ ಪ್ಲಾಸ್ಟಿಕ್ ಸಾಮಾನು ಮಾರುವವರ ಕೂಗು ದಾಟಿ. ವಾಚಾಳಿ ಹೆಂಗಸರ ಜಗಳ ದಾಟಿ. ರಸ್ತೆಯಲ್ಲಿ ಕ್ರಿಕೆಟ್ ಆಡುವ ಚಿಣ್ಣರ ಗೊಂದಲ ದಾಟಿ. ಇವರೆಲ್ಲಾ ಎಷ್ಟು ಹಾಯಾಗಿದ್ದಾರೆ! ಇವರ್‍ಯಾರಿಗೂ ತನ್ನಂಥ ಪೇಚೇ ಇಲ್ಲವಲ್ಲ.

ತನ್ನದೇ ಗುಂಗಿನಲ್ಲಿದ್ದ ರಾಜಾರಾಮ ಪಕ್ಕದಲ್ಲಿ ಯಾರೋ ನಿಂತಂತಾಗಿ ಬೆಚ್ಚಿ ಬಿದ್ದ. ಮೊದಲು ಚೀನೀನ ನರ್ಸರಿಗೆ ಕರೆದುಕೊಂಡು ಹೋಗುತ್ತಿದ್ದ ಸೈಕಲ್ ಗಾಡಿಯವ. "ಏನು ಸ್ವಾಮಿ.. ಇಷ್ಟು ದೂರ.. ಊರಾಚೆ ಬಂದಿದೀರಾ... ಯಾವ ಕಡೆ...." "ಹೀಗೇ... ಯಾರನ್ನೋ ನೋಡುವುದಿತ್ತು..." ರಾಜಾರಾಮ ತಲೆಕೆರೆದುಕೊಂಡ. ಇವನಿಗೇನಾದರೂ ತಿಳಿದು ಹೋಯಿತೋ? ಹೇಗೆ ತಿಳಿದಿತು? ತನ್ನ ಮುಖದ ಮೇಲೇನೂ ಬರೆದಿಲ್ಲವಲ್ಲ.. ಮುಖವನ್ನೊಮ್ಮೆ ಕರ್ಚೀಫಿನಿಂದ ಒರೆಸಿಕೊಂಡು, ಅದನ್ನು ನಿಧಾನವಾಗಿ ಮಡಿಸಿ ಜೇಬಿನಲ್ಲಿಟ್ಟುಕೊಂಡು, ಏನೂ ಆಗದ ಹಾಗೆ ಮುಖಭಾವ ತಾಳಿ, ಸಿಳ್ಳೆ ಹಾಕುತ್ತಾ ನಿಧಾನವಾಗಿ ಮುಂದೆ ಹೆಜ್ಜೆ ಹಾಕತೊಡಗಿದ. ಅವನು ಬಿಡಲಿಲ್ಲ. "ಇನ್ನು ಮುಂದೆ ಮನೆಗಳೇ ಇಲ್ವಲ್ಲಾ ಸ್ವಾಮಿ... ದಾರಿ ಗೀರಿ ತಪ್ಪಿದಿರೇನು..." "ನಿನಗ್ಯಾಕೋ ತಲೆಹರಟೆ, ನಿನ್ನ ದಾರಿ ನೀನು ನೋಡಿಕೋ..." ರಾಜಾರಾಮ ಗದರಿ ನಡಿಗೆ ಜೋರು ಮಾಡಿದ. ಎಂದೂ ಜೋರಾಗಿ ಮಾತನಾಡದಿದ್ದ ಸ್ವಾಮಿಯೋರು ಹೀಗೇಕೆ ಎಂದು ಪಿಳಿಪಿಳಿ ನೋಡಿದ ಗಾಡಿಯವ.

ಇಷ್ಟು ಹೊತ್ತಿಗೆ ರಾಜಾರಾಮನ ತುಟಿ ಒಣಗುತ್ತಿತ್ತು. ಬಿಸಿಲು ರಾಚುತ್ತಿತ್ತು. ತನಗರಿವಿಲ್ಲದೆಯೇ ಊರಾಚೆ ಬಂದಾಗಿದೆ. ಸ್ವಲ್ಪ ಸಮಾಧಾನವಾಗಿ ನಿರಾಳವಾಗಿ ಉಸಿರಾಡುವಂತಾಯಿತು ಸಧ್ಯ, ಕೊನೇ ಪಕ್ಷ, ಇನ್ನು ಪರಿಚಯದವರು ಸಿಗುವ ಸಂದರ್ಭ ಕಡಿಮೆ. ಮೇಲಿಂದ ಮೇಲೆ "ಎಲ್ಲಿಗೆ ಹೊರಟಿದ್ದೀರಾ..." ಎಂಬ ಪ್ರಶ್ನೆ ಎದುರಿಸಬೇಕಾಗಿಲ್ಲ. ನಿಧಾನವಾಗಿ ಸಾಗಿದಂತೆ ಕಂಡದ್ದು ಒಂದು ಆಲದ ಮರ. ಅದರ ಪಕ್ಕದಲ್ಲಿ ಒಂದು ಪೆಟ್ಟಿಗೆಯಂಗಡಿ. ಅಂಗಡಿಯವ ಮುದುಕ. ಅವನೊಂದಿಗೆ ೧೮-೨೦ ವರ್ಷದ ಹುಡುಗಿ. ಕತ್ತಿನಲ್ಲಿ ಮಾಂಗಲ್ಯವಿತ್ತು. ಮಗಳೇನೋ.... ಅಥವಾ ಹೆಂಡತಿಯೋ? ಚಿಲ್ಲರೆ ಕೊಟ್ಟು ಪಾಪಿನ್ಸ್ ಕೊಂಡ ಅಂಗಡಿಯವ ಸ್ನೇಹದಿಂದ ಕೇಳಿದ, "ಏನ್ ಸ್ವಾಮಿ ಇಷ್ಟು ದಣಿದಿದ್ದೀರಾ.. ಆ ಬಿಸಿಲಲ್ಲಿ ನಡ್ಕೊಂಡು ... ಎತ್ತ ಕಡೆ.... ಏನ್ಕತೆ..."

"ಆಂ.... ಹೀಗೇ... ಅಲ್ಲಪ್ಪಾ... ಎಂಥಾ ಬಿಸಿಲು... ಕಾಲ ಎಷ್ಟು ಕೆಟ್ಟೋಯ್ತು.ಅದೇನೋ ಅಗ್ನಿ ನಕ್ಷತ್ರ ಅಂತಾರಲ್ಲಾ... ಹಾಗೇ..." ಕರ್ಚೀಫಿನಿಂದ ಹಣೆಯ ಮೇಲಿನ ಬೆವರೊರೆಸಿಕೊಂಡ. ಅವನ ಮಗಳು ಇವನನ್ನೇ ನೋಡುತ್ತಿದ್ದಳು. "ಬಾಯಾರಿದೆಯಾ..." ಎನ್ನುತ್ತಾ ಒಂದು ಲೋಟದ ತುಂಬಾ ತಣ್ಣನೆಯ ಹೂಜಿ ನೀರು ಕೊಟ್ಟಳು. ಕೊಡುವಾಗ ಬೇಕೆಂದೇ ಕೈ ತಾಕಿಸಿದಳೇ? ಅವಳತ್ತ ಒಂದು ಕ್ಷಣ ದಿಟ್ಟಿಸಿ ನೋಡಿದ ರಾಜಾರಾಮ. ರಸರಸವಾಗಿ ಲಕ್ಷಣವಾಗಿದ್ದಳು. ಹೊಳೆಯುವ ಕಣ್ಣು, ಎಲೆಯಡಿಕೆಯಿಂದ ಕೆಂಪೇರಿದ ತುಟಿ. ಅದನ್ನು ಅರಿತಂತೆ ಅವಳು ಕಿಸಕ್ಕನೆ ನಕ್ಕಳು. "ಅಲ್ಲಾ ಅಯ್ಯಾವರು ಎಲ್ಲಿಗೆ ಹೊರಟೀರಿಂತಾನೇ ಹೇಳಲಿಲ್ಲ... ಇಲ್ಲೇ ಇಷ್ಟು ದಣಿವಾರಿಸಿಕೊಂಬೋದಲ್ಲಾ..." ಇವಳೇನು ತನ್ನನ್ನು ಪರೀಕ್ಷಿಸುತ್ತಿದ್ದಾಳೆಯೇ? ಅಥವಾ ಇವಳಿಗೂ ತಿಳಿದು

ಹೋಯಿತೋ. ಇವಳಿಗೆ ತನ್ನ ಪೇಚು ಹೇಳಿಬಿಟ್ಟರೆ ಏನು? ನಕ್ಕರೆ? ಏನಾಯಿತು? ಮತ್ತೆ ಈ ಜನ್ಮದಲ್ಲಿ ಇವಳ ಮುಖ ನೋಡ್ತಿನೋ ಇಲ್ಲವೋ? ಧೈರ್ಯ ತಂದುಕೊಂಡ ರಾಜಾರಾಮ. "ಅಯ್ಯೋ..... ಮನೆಯಿಂದ ಬೆಳಗಾಗೆದ್ದು ಹೊರಟೆ.. ಎಲ್ಲಿಗೆ ಹೋಗಬೇಕೆಂದಿದ್ದೇನೆಂದೇ ಮರೆತು ಹೋಯಿತು ನೋಡು.... ಹೀಗೇ ನಡೀತಾ ಹೋದರೆ ನೆನಪು ಬರಬಹುದೆಂದು ನಡೀತಾ ಬಂದೆ. ಇಷ್ಟು ದೂರ..." ಹೇಳಿದ ಮೇಲೆ ಏಕೋ ಅವಮಾನವಾಯಿತು. ತಾನ್ಯಾಕೆ ಇವಳಿಗೆ ಹೇಳಬೇಕಾಗಿತ್ತು?

"ಅಲ್ಲಾ... ಇಷ್ಟು ಹೊತ್ತಾಯ್ತು... ಇನ್ನೂ ನೆನಪು ಬರಲಿಲ್ಲಾಂತೀರಾ... ಹೀಗ್ಮಾಡಿ. ಎಲ್ಲಿಂದ ಹೊರಟಿದ್ರೋ ನೆನಪಿದೆಯಲ್ಲಾ. . ಅಲ್ಲಿಗೇ ವಾಪಸ್ಸು ಹೋಗ್ಬಿಡಿ...." ಅವಳು ಬಿದ್ದು ಬಿದ್ದು ನಗತೊಡಗಿದಳು. "ಸುಮ್ನೆ ಒಳಕ್ಕೋಗು..." ಮುದುಕ ಗದರಿದ. ಏನೊಂದೂ ಮಾತನಾಡದೆ ರಾಜಾರಾಮ ಆ ಜಾಗ ಬಿಟ್ಟ.

ಹಾಗೇ ಹತ್ತಿರವಾದದ್ದು ೪ ರಸ್ತೆಗಳ ಚೌಕ -ಒಂದು ಹೆದ್ದಾರಿ. ೨ ಟಾರು ರಸ್ತೆಗಳು. ಒಂದು ಕಾಲುದಾರಿ ಎನ್ನಬಹುದಾದ ಮಣ್ಣಿನ ರಸ್ತೆ. ದೂರದಲ್ಲಿ ಗುಡಿಯೊಂದರ ಬಾವುಟವೂ ಕಾಣಿಸುತ್ತಿತ್ತು. ಟಾರು ರಸ್ತೆಗಳನ್ನು ಬಿಟ್ಟು ಕಾಲುದಾರಿಯಲ್ಲಿಯೇ ಹೆಜ್ಜೆ ಹಾಕಿದ ರಾಜಾರಾಮ. ಹಾಗೇ ಸಾಗಿದಂತೆ ಒಂದು ದೊಡ್ಡ ಮರದ ಕೆಳಗೆ ಕಲ್ಲಿನ ಬೆಂಚೊಂದು ಕಾಣಿಸಿತು. ಯಾವ ಪುಣ್ಯಾತ್ಮರು ಮಾಡಿಸ್ವಿದ್ದರೋ! ಅಥವಾ ತನ್ನಂಥಾ ಹುಚ್ಚರ್‍ಯಾರಾದರೂ ಬಂದರೆ ಇರಲೆಂದೋ? ಅದರ ಮೇಲೆ ಕೂತು ನಿಧಾನವಾಗಿ ಯೋಚಿಸುವುದು . ಉತ್ತರ ಹೊಳೆಯಬಹುದು. ಆದರೆ ತನಗಾದರೂ ಯಾಕಿಂಥಾ ಹಠ? ಹಾಯಂತ ಮನೆಗೆ ಹೋಗಿ ಊಟ ಮಾಡಿ ಮಲಗಿದರೆ? ಸುಗುಣಾ ಏನಡಿಗೆ ಮಾಡಿರಬಹುದು? ಆಲೂಗಡ್ಡೆ, ಈರುಳ್ಳಿ ಹುಳಿ, ಸೌತೇಕಾಯಿ ಪಚಡಿ, ಸಂಡಿಗೆ... ವಾಪಾಸ್ಸು ಹೊರಟು ಹೋದರೆ? ಸುಗುಣಾ ಕೇಳಿದರೆ, "ನಿನಗೆ ನಾನೆಲ್ಲಿ ಹೋದರೇನು, ಬಂದರೇನು...? ಎಂದು ಒಗಟಿನಲ್ಲೇ ಮಾತನಾಡಿದರಾಯಿತು. ಇನ್ಯಾರು ಕೇಳಲು ಬರುತ್ತಾರೆ? ಆದರೆ, ಇಷ್ಟು ಬೇಗ ಸೋಲೊಪ್ಪಬೇಕೇ? ಇಷ್ಟು ದೂರ ಬಂದು, ನೆನಪು ಬಾರದೆ ಮನೆಗೆ ಹೋಗುವುದು ಸರಿಯಲ್ಲ....

ಹಸಿವು, ಬಾಯಾರಿಕೆ, ದಣಿವು ಕಾಡುತ್ತಿತ್ತು. ಮಂಪರು ಬರುತ್ತಿತ್ತು. ಯಾವಾಗ ರಾಜಾರಾಮ ನಿದ್ದೆ ಹೋದನೋ ಅವನಿಗೇ ತಿಳಿಯದು. ಕಣ್ತೆರೆದಾಗ ಬಿಸಿಲಿಳಿಯುತ್ತಿತ್ತು. ಇಷ್ಟೊತ್ತು ಹೊತ್ತು ಕಲ್ಲಿನ ಮೇಲೆ ಮಲಗಿದ್ದು ಮೈ ಕೈ ಎಲ್ಲಾ ನೋಯುತ್ತಿತ್ತು. ಎದ್ದು ಕಣ್ಮುಚ್ಚಿ ಕುಳಿತ. ಬೆಳಗ್ಗಿಂದ ನಡೆದದ್ದೆಲ್ಲಾ ಕಣ್ಮುಂದೆ ಹಾದುಹೋಯಿತು. ಕೈಗಡಿಯಾರ ನೋಡಿಕೊಂಡರೆ ಆಗಲೇ ೫.೩೦ ಗಂಟೆ. ಇಷ್ಟು ಹೊತ್ತು ನಿದ್ದೆ ಮಾಡಿಬಿಟ್ಟೆನೆ? ವಾತಾವರಣ ಪ್ರಶಾಂತವಾಗಿತ್ತು. ಸುತ್ತಲೂ ಹಚ್ಚ ಹಸಿರು, ತಣ್ಣನೆಯ ಗಾಳಿ, ಕಣ್ಣು ಹಾಯುವವರೆಗೂ ಹೋಗಿರುವ ನಿರ್ಜನ ರಸ್ತೆ. ಆಗ ರಾಜಾರಮನಿಗೆ ತಲೆಯಲ್ಲಿ ಛಕ್ಕನೆ ಒಂದು ಯೋಚನೆ ಹೊಳೆಯಿತು. ಈ ದಾರಿಯಲ್ಲಿ ಬಂದವರನ್ನೆಲ್ಲಾ ಎಲ್ಲಿಗೆ ಹೋಗುತ್ತಿದ್ದಾರೆಂದು ಕೇಳುವುದು. ಇದರಿಂದ ತನ್ನ ಪ್ರಶ್ನೆಗೆ ಉತ್ತರ ಸಿಕ್ಕರೂ ಸಿಗಬಹುದು. ನೆನಪು ಬರಬಹುದು. ಆದರೆ ಇಷ್ಟು ನಿರ್ಜನ ರಸ್ತೆಯಲ್ಲಿ ಇಷ್ಟು ಸಂಜೆಯ ಮೇಲೆ ತಾನೆಷ್ಟು ಹೊತ್ತು ಕುಳಿತರೂ ಯಾರಾದರೂ ಬರಬಹುದೆಂಬ ಭರವಸೆ ಏನು? ಇಲ್ಲಿ ನೋಡಿದರೆ ತಾನೀಗ ವಾಪಾಸಾಗಲು ಮನಸ್ಸು ಮಾಡಿದರೂ ಒಂದು ಬಸ್ಸಾದರೂ ಸಿಗುವ ಭರವಸೆ ಇಲ್ಲ. ತನಗೆ ಹುಚ್ಚೇನಾದರೂ ಹಿಡಿಯಿತೇ? ಸಾಧಾರಣ ಮರೆವಿನಿಂದ ಇವತ್ತು ಬೆಳಗ್ಗೆ ತಾನೆಲ್ಲಿಗೆ ಹೊರಟಿದ್ದೇನೆಂದು ಮರೆತಿದ್ದು ನಿಜ. ಆದರೆ ಅದಕ್ಕಾಗಿ ಮೊಂಡುತನ ಮಾಡಿ, ತನ್ನನ್ನೇ ತಾನು ಶಿಕ್ಷಿಸಿಕೊಳ್ಳುವುದರಲ್ಲಿ ಅರ್ಥವಿದೆಯೇ?

ಸಂಜೆಯಾಗುತ್ತಿತ್ತು. ಕತ್ತಲು ಕದ ತಟ್ಟುತ್ತಿತ್ತು. ಸುತ್ತಲೂ ವಿಚಿತ್ರ ನಿಶ್ಯಬ್ದ. ಶಾಂತಿ. ತಲೆಯೆಲ್ಲಾ ಧಿಂ. ಬರಿಯ ಪಕ್ಷಿಗಳ, ಮರದೆಲೆಗಳ ಶಬ್ದ. ಯಾವುದೋ ಬೇರೆ ಜಗತ್ತಿಗೇ ಹೋದ ಅನುಭವ. ಮೈಯೆಲ್ಲಾ ಕಣ್ಣಾಗಿ, ಕಿವಿಯಾಗಿ ತನ್ನನ್ನು ಕಾಡುತ್ತಿರುವ ಪ್ರಶ್ನೆಗೆ ಉತ್ತರ ರೂಪವಾಗಿ ಬರಬುಹುದಾದ ದಾರಿಹೋಕರಿಗಾಗಿ ಕಾದು ಕುಳಿತ ರಾಜಾರಾಮ.

ದೂರದಲ್ಲಿ ವ್ಯಕ್ತಿಯೊಬ್ಬ ತನ್ನತ್ತ ನಡೆದು ಬರುತ್ತಿರುವುದು ಕಂಡಿತು. ಹತ್ತಿರವಾದಂತೆ ಮಸುಕು ಮಸುಕಾಗಿದ್ದ ಆಕಾರ ಸ್ಪಷ್ಟವಾಯಿತು. ಮೈಯೆಲ್ಲಾ ಧೂಳು, ಕೊಳಕು ಕೂದಲು, ಸೊಂಟದ ಸುತ್ತ ಒಂದು ಹರಕು ಚಿಂದಿ ಪಂಚೆ. ಕೈಯಲ್ಲೊಂದು ಕುಡುಗೋಲು. ತಲೆ ಮೇಲೆ ಹುಲ್ಲು ಹೊರೆ, ನೇರವಾಗಿ ನೋಡುತ್ತಾ, ಇವನನ್ನು ಹಾದು ಹೋಗುತ್ತಿದ್ದ ಆತ.

**(ಮುಂದುವರೆಯುವುದು)**

(ಕಳೆದ ಸಂಚಿಕೆಯಿಂದ)

# 'ಉಮಾರಾವ್ ಕತೆಗಳು'– ಒಂದು ಒಳನೋಟ

✍ ಡಾ. ಮಮತಾ ರಾವ್

1995ರಲ್ಲಿ ಪ್ರಕಟವಾದ 'ಕಡಲ ಹಾದಿ' ಇವರ ಎರಡನೆಯ ಕಥಾಸಂಕಲನ. 1992ರ ಸಂಗ್ರಹಕ್ಕಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ಆಯ್ಕೆ ಮಾಡಿದ ಕಥೆ 'ಕಡಲ ಹಾದಿ'. ಮಾಧವ ಕಣ್ಮರೆಯಾದಾಗ ಅವನ ಪತ್ನಿ ಸೋನಿ ಬಸುರಿ. ವರ್ಷಗಳೇ ಕಳೆದರೂ ಆತ ಜೀವಂತವಿದ್ದಿರಬೇಕೆಂಬಾಸೆಯಿಂದ ಸೋನಿ ಇನ್ನೂ ಆತನ ಶೋಧನೆಯಲ್ಲಿ ನಿರತಳಾಗಿದ್ದಾಳೆ. ಅವಳ ಅಡುಗೆಯವಳಾದ ಸಾವಿತ್ರಮ್ಮಳೂ ನಿರ್ಗತಿಕಳು. ಆಕೆ ಹದಿನಾಲ್ಕು ವರ್ಷದವಳಿದ್ದಾಗಲೇ ಮನೆಬಿಟ್ಟ ಗಂಡ, ಎಷ್ಟೋ ವರ್ಷಗಳ ನಂತರ ಸಿಕ್ಕುತ್ತಾನೆ. ಯಾರು ಒತ್ತಾಯಿಸಿದರೂ ಮನೆಗೆ ಬರಲೊಪ್ಪದ ಅವನ ಕುರಿತು ಆಕೆ " ಮನಸ್ಸಿಲ್ಲದವರಿಗೆ ಒಪ್ಪಿಸಿ ಕರೆದುಕೊಂಡು ಬಂದಾದರೂ ಏನು ಪ್ರಯೋಜನ? ಹಾಗೆ ಬೇಕಿದ್ದರೆ ಅವರೇ ಬರುತ್ತಿದ್ದರು." ಎಂದು ನಿರ್ಲಿಪ್ತರಾಗಿ ಉತ್ತರಿಸುತ್ತಾರೆ. ಪ್ರತಿರಾತ್ರಿ ತನ್ನ ಪುಟ್ಟ ಮಗಳು ಪ್ರೀತಿಯನ್ನು ತಬ್ಬಿ ಎಲ್ಲವನ್ನೂ ಮರೆತು ಹೊಸಬಾಳು ಬಾಳಬೇಕೆನ್ನುವ ನಿರ್ಧಾರ ಮಾಡುವ ಸೋನಿ ಯಾರೋ ಕೊಟ್ಟ ಸುಳಿವು ಹಿಡಿದು ಮತ್ತೆ ಆಸೆಯಿಂದ ಆತನನ್ನು ಹುಡುಕುತ್ತಾ ದಮನ್‌ಗೆ ಬರುತ್ತಾಳೆ. ದಮನ್‌ನಲ್ಲಿ ಮಾಧವನನ್ನು ಹುಡುಕುವ ವ್ಯರ್ಥ ಪ್ರಯತ್ನವನ್ನು ನಡೆಸುತ್ತಾ, ಅಲ್ಲಿಯ ಕಡಲಹಾದಿಯಲ್ಲಿ ತನಗೆದುರಾದವರೆಲ್ಲರ ಮುಖದಲ್ಲೂ ಆತನ ಮುಖವನ್ನು ಕಾಣಲು ಪ್ರಯತ್ನಿಸಿ ಸೋಲುತ್ತಾಳೆ. ತನ್ನ ಗಂಡ ಕಾಣೆಯಾದುದಕ್ಕೆ ತನ್ನನ್ನೇ ದೂಷಿಸುತ್ತಾ ಅಸ್ವಸ್ಥಗೊಳ್ಳುತ್ತಿದ್ದ ಸೋನಿ ದಮನ್ ಜೈಲಿನಲ್ಲಿರುವ ಕೈದಿಗಳ ಹೆಸರಿನ ಯಾದಿಯಲ್ಲಿಯೂ ಆತನ ಹೆಸರನ್ನು ಶೋಧಿಸುತ್ತಾಳೆ. ಅಲ್ಲಿಯ ಸ್ಮಶಾನದಲ್ಲಿ ಗೋರಿಗಳ ಮೇಲೆ ಕೆತ್ತಿರುವ ಹೆಸರುಗಳನ್ನು ಓದುತ್ತಾ ಹೋಗುವ ಸೋನಿ, ಗಂಡನ ವಯಸ್ಸಿನ ತರುಣನ ಗೋರಿಯನ್ನು ನೋಡಿ ಆತನ ಸಾವಿನ ಕಾರಣವನ್ನು ಊಹಿಸುತ್ತಾ, ಆತನಿಗಾಗಿ ಎಲ್ಲೋ ದೂರದೂರಿನಲ್ಲಿ ಕಾಯುತ್ತಿರಬಹುದಾದ ಆತನ ಹುಡುಗಿಯ ದುಃಖದಲ್ಲಿ ತನ್ನ ಮನದ ನೋವಿನ ಪ್ರತಿಬಿಂಬವನ್ನು ಗುರುತಿಸಿ ಮಾಧವ ಇನ್ನೆಂದೂ ಹಿಂತಿರುಗಲಾರ ಎನ್ನುವುದನ್ನು ಅರಿತುಕೊಳ್ಳುತ್ತಾಳೆ. ಸಾವಿತ್ರಮ್ಮನವರ ಮಾಗಿದ ಅನುಭವಗಳು ದರ್ಶಿಸುವ ಸತ್ಯವನ್ನು ತನ್ನದಾಗಿಸುವ ಮೂಲಕ ಸೋನಿ ತನ್ನ ಮನದ ಭಾರವನ್ನು ಹಗುರಗೊಳಿಸಿ ಹೊಸಬಾಳಿನತ್ತ ಹೆಜ್ಜೆಯನ್ನಿಡುತ್ತಾಳೆ. ತಮ್ಮದಾಗದ ಸಂಬಂಧಗಳಿಗಾಗಿ ವ್ಯರ್ಥವಾಗಿ ಜೀವನ ವ್ಯಯಿಸುವುದನ್ನು ಬಿಟ್ಟು ಬದುಕು ಕಟ್ಟಿಕೊಳ್ಳಬೇಕೆನ್ನುವ ಆಶಯವಿಲ್ಲಿದೆ. ನವ್ಯ ಚಿಂತನೆಗಳನ್ನು ಅಭಿವ್ಯಕ್ತಿಸುವ ಅಸ್ತಿತ್ವವಾದಿ ಕಥೆ.

'ದೇಹಾಂತ'–ಶ್ರೀಪಾದು ಮಾವ ರಾಜೀವನ ಬಾಲ್ಯದ ಅತ್ಯಂತ ಪ್ರೀತಿಯ ಸಂಗಾತಿ. ಹೊಸ ಕ್ಷಿತಿಜದ ಶೋಧದಲ್ಲಿ ತಾನು ಹುಟ್ಟಿ ಬೆಳೆದ ಗ್ರಾಮೀಣ ಜಗತ್ತನ್ನು ತ್ಯಜಿಸಿ ಬಹುದೂರ ಬಂದಿರುವ ರಾಜೀವ ಶ್ರೀಪಾದು ಮಾಮನ ಸಿದ್ಧಾಂತಗಳಿಗೆಲ್ಲಾ ತಿಲಾಂಜಲಿಯನ್ನು ಕೊಟ್ಟಿರುತ್ತಾನೆ. ಇದೀಗ ಶ್ರೀಪಾದುಮಾಮನ ಸಾವಿನ ಸುದ್ದಿ ಕೇಳಿ ಆತ ತನ್ನ ಬದುಕಿನ ದುರಂತವನ್ನು ಮುಖಾಮುಖಿಯಾಗಿಸುತ್ತಾನೆ. ಶ್ರೀಪಾದುಮಾಮನಿಂದ ದೂರವಾಗಿ ಅವನಿಗಿಂತ ಮೊದಲೇ ತನ್ನ ದೇಹಾಂತವಾದ ಕಟುಸತ್ಯದ ಅರಿವಾದುದರಿಂದಲೇ ತನ್ನ ಹೆಸರಿಗೆ ಬರೆದ ಶ್ರೀಪಾದುಮಾಮನ ಆಸ್ತಿಯನ್ನು ತೆಗೆದುಕೊಳ್ಳಲು ನಿರಾಕರಿಸುತ್ತಾನೆ.

'ರೋಡೋಡೆಂಡ್‌ರಾನ್'– ಹೆಣ್ಣು–ಗಂಡಿನ ಸಂಬಂಧದ ಕುರಿತಾದ ಮೂಲಭೂತ ಪ್ರಶ್ನೆಯನ್ನು ಶೋಧಿಸುವ ಕಥೆ. ಶಿಮ್ಲಾದಲ್ಲಿ ಎಲ್ಲೆಲ್ಲೂ ಕಂಡುಬರುವ ಮರ ರೋಡೋಡೆಂಡ್‌ರಾನ್. ಮೈತುಂಬಾ ಕಡುಕೆಂಪು ಹೂಗಳು ಅರಳಿರುವ ಈ ಮರ ಒಂದು ರೀತಿಯಲ್ಲಿ ಹೆಣ್ಣಿನ ಮನದ ಹಾಗೂ ಮೈಯ ಉತ್ಕಟ ಬಯಕೆಗಳ ಪ್ರತೀಕ. ಆ ಮರದ ಹೆಸರನ್ನು ಹೊಂದಿರುವ ಮನೆಯನ್ನು ನಾಯಕಿ ಶಾಲಿನಿ ಒಂಟಿಯಾಗಿ ಪ್ರವೇಶಿಸುತ್ತಾಳೆ. ಮುಂಬಯಿಯ ಯಾಂತ್ರಿಕ ಬದುಕಿನ ಒತ್ತಡದಿಂದಾಗಿ ತನ್ನ ಮತ್ತು ಪ್ರತೀಕ್‌ನ ನಡುವಿನಲ್ಲಿ ಉಂಟಾದ ದೂರವನ್ನು ಅರ್ಥೈಸುವ ಹಾಗೂ ತಮ್ಮೀರ್ವರ ಸಂಬಂಧದ ನಿಜಾರ್ಥವನ್ನು ಅರಸುವ ಏಕಮೇವ ಉದ್ದೇಶದಿಂದ ಬರುವ ಶಾಲಿನಿಯ ಶರೀರದ ಬಯಕೆಯ ಅಸಫಲತೆ ವ್ಯಕ್ತಗೊಳ್ಳುವುದು ಇಲ್ಲಿ ಒಂದು ಕನಸಿನ ಮೂಲಕ. ಅವಳ ಲೈಂಗಿಕ ತೃಷೆಯೂ ಸಂಪ್ರದಾಯದ ಹೆಪ್ಪುಗಟ್ಟುವ ಹೊದಿಕೆಯಲ್ಲಿ ರೋಡೋಡೆಂಡ್‌ರಾನ್ ಹೂಗಳಂತೆ ಬಣ್ಣ ಕಳೆದು ಆರಕ್ತವಾಗುವ ಚಿತ್ರಣವಿಲ್ಲಿದೆ. ಸಮಾಜ ನಿರ್ಮಿತ ಸಂಬಂಧಗಳ ಚೌಕಟ್ಟಿನೊಳಗೆ ಬಂಧಿತಳಾಗಿರುವ ಹೆಣ್ಣು, ನಿಸರ್ಗ ಸಹಜವಾದ ಬಯಕೆಯನ್ನು ಪೂರೈಸಿಕೊಳ್ಳಲಾಗದೆ ತೊಳಲಾಡುವುದನ್ನು ಉಮಾರಾವ್ ಅವರು ಚಿತ್ರಿಸಿದ ಪರಿ ಬಹು ಮನೋಜ್ಞವಾದುದು. ಇಲ್ಲಿ ಪ್ರಕೃತಿ ಸೌಂದರ್ಯವನ್ನು ಬಣ್ಣಿಸಿದಂತೆಯೇ '..ರಿ ಹರಿ' ಕಥೆಯಲ್ಲಿ ಶಿಥಿಲಗೊಂಡ ಮನೆಯೊಂದರ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ ಮಾಡುತ್ತಾರೆ. ಈಗಲೋ ಆಗಲೋ ಬಿದ್ದು ಹೋಗಬಹುದಾದ ಆ ಮನೆಯಲ್ಲಿ ಯಾವುದೋ ಆಶೆಯಲ್ಲಿ ಜೀವ ಹಿಡಿದು, ದಾರುಣ ಅವಸ್ಥೆಯಲ್ಲಿರುವ ತಾಯಿ ಮಗಳ ಚಿತ್ರಣ ಬೆಚ್ಚಿಬೀಳಿಸುತ್ತದೆ. ಮನುಷ್ಯನ ಸ್ಥಿತಿಗತಿಗಳು, ಆತನ ಪರಿಸರದ ಕುರಿತಾದ ಚಿಕಿತ್ಸಕ ದೃಷ್ಟಿ, ಪ್ರತಿಯೊಂದನ್ನೂ ಸೂಕ್ಷ್ಮವಾಗಿ ಗಮನಿಸುತ್ತಾ ನಮ್ಮ ಕಣ್ಣಿಗೆ ಕಟ್ಟುವಂತೆ

ಬಣ್ಣಿಸುವ ಉಮಾರಾವ್ ಅವರ ವರ್ಣನಾಕೌಶಲ್ಯ ಬೆರಗು ಮೂಡಿಸುತ್ತದೆ. ಹಲವು ಅರ್ಥಸಾಧ್ಯತೆಗಳನ್ನು ಕಟ್ಟಿಕೊಡುವ ಕಥೆ 'ಕತೆ ಕಳುವಾಗಿದೆಯೇ?'. ಅವ್ಯಕ್ತ ಭಯ, ಅನಾಥ ಪ್ರಜ್ಞೆ ಗಾಢವಾಗಿರುವ 'ಸಬ್ ವೇ ಮೂಲಕ', 'ರಾಜಾರಾಮನಿಗೆ ಹಿಂದೆಂದೂ ಹೀಗಾಗಿರಲಿಲ್ಲ' ಕಥೆಗಳ ಮೇಲೆ ಚಿತ್ತಾಲರ ಪ್ರಭಾವ ಇಣುಕುತ್ತದೆ.

'ಹಾವಾಡಿಗ' ಸಂಕಲನದಲ್ಲಿರುವ ಕಥೆಗಳು ಬಹಳ ಭಿನ್ನವಾದ ವಸ್ತುಗಳನ್ನು ಹೊಂದಿವೆ. ಇವುಗಳಲ್ಲಿ ಗಮನಿಸಬೇಕಾದ ಕಥೆಗಳೆಂದರೆ, 'ಪಯಣಿಗರು', 'ಅಂತರ್ಜಾಲ', 'ಬೆತ್ತಲೆ', 'ಸರೋವರ' ಹಾಗೂ 'ಮನೆಕೆಲಸ'. ನಿರುದ್ಯೋಗಿ ದಿಲೀಪನಿಗೆ ರೆಡಿಮೇಡ್ ಅಂಗಡಿಯೊಂದರಲ್ಲಿ ಬೆತ್ತಲೆ ಬೊಂಬೆಗಳಿಗೆ ಸೀರೆ ಉಡಿಸುವ ಕೆಲಸ ಸಿಕ್ಕಾಗ ತಾಯಿಗೆ ತಾನು ಸೇಲ್ಸ್ ಮ್ಯಾನ್ ಎಂದು ಸುಳ್ಳು ಹೇಳುತ್ತಾನೆ. ಅವನ ಸುಳ್ಳು ಬಹಿರಂಗವಾಗುವ ಪ್ರಕ್ರಿಯೆ, ಅದರಿಂದ ಅವನು ಅನುಭವಿಸುವ ಮಾನಸಿಕ ತೊಳಲಾಟ 'ಬೆತ್ತಲೆ'ಕಥೆಯಲ್ಲಿದೆ. 'ಮನೆಕೆಲಸ' ಕಥೆಯಲ್ಲಿ ಹೆಣ್ಣು ಉದ್ಯೋಗ ಮಾಡುತ್ತಿರುವಾಗ, ನಿರುದ್ಯೋಗಿ ಗಂಡ ಮನೆಕೆಲಸ ಮಾಡುತ್ತಾ ಮಗಳನ್ನು ಸಂಭಾಳಿಸುವ ಚಿತ್ರಣವನ್ನು ನೀಡುವ ಮೂಲಕ ಉದ್ಯೋಗಸ್ಥ ಪತ್ನಿ ಮತ್ತು ನಿರುದ್ಯೋಗಿ ಪತಿಯ ನಡುವಿನ ಸಂಬಂಧಗಳನ್ನು ಸೂಕ್ಷ್ಮವಾಗಿ ಶೋಧಿಸುತ್ತಾರೆ. ನಮ್ಮ ಸಮಾಜದಲ್ಲಿ ಆಳವಾಗಿ ಬೇರುಬಿಟ್ಟ ಪುರುಷಪ್ರಧಾನ ಚಿಂತನೆಗಳನ್ನು ಮರುಪ್ರಶ್ನಿಸುವ ಪ್ರಯತ್ನವನ್ನು ಇಲ್ಲಿ ಬಹಳ ಸಹಜತೆಯಿಂದ ನಡೆಸಲಾಗಿದೆ.

'ಪಯಣಿಗರು' ಕಥೆ- ತನ್ನ ಮಗಳು ಅಮೆರಿಕನ್ ಹುಡುಗನನ್ನು ಪ್ರೀತಿಸುವುದು ಹಾಗೂ ಅವನೊಂದಿಗೆ ಮದುವೆಗೆ ಮುಂಚೆ ಲಿವ್-ಇನ್ ರಿಲೇಶನ್‌ನಲ್ಲಿರ ಬಯಸುವುದನ್ನು ಅಪರಿಚಿತ ಪರಿಸರದಲ್ಲಿ ಅಪರಿಚಿತ ಮಹಿಳೆಯೊಂದಿಗೆ ಮುಕ್ತವಾಗಿ ಹೇಳಿಕೊಳ್ಳುವ ತಾಯಿ; 'ಅಂತರ್ಜಾಲ' ಕಥೆಯಲ್ಲಿ ವಿದುರ ಮಾವ ತಡರಾತ್ರಿಯಲ್ಲಿ ಅಂತರ್ಜಾಲದಲ್ಲಿ ಅಶ್ಲೀಲ ಸೈಟ್‌ಗಳನ್ನು ಜಾಲಾಡುವುದನ್ನು ಕಂಡ ಕಾರಣವೇ ಆತ್ಮಹತ್ಯೆ ಮಾಡಿರಬಹುದೆನ್ನುವ ಅಪರಾಧಿ ಭಾವದಲ್ಲಿ ನಲುಗುವ ಸೊಸೆ; ತನ್ನಿಚ್ಛೆಗೆ ವಿರುದ್ಧವಾಗಿ ಸಾಗಿದ ಬದುಕಿನಹಾದಿಯಲ್ಲಿ ತಾಯ್ತನದ ಬಯಕೆಯನ್ನು ಅದುಮಿಟ್ಟು ತನ್ನ ನೋವುಗಳನ್ನು, ಅಪೂರ್ಣ ಕನಸುಗಳನ್ನು ಬಣ್ಣ-ಬಣ್ಣದ ದಾರಗಳ ಮೂಲಕ ಕಸೂತಿಯಲ್ಲಿ ಹಿಡಿದಿಡುತ್ತಾ ಕೊನೆಯುಸಿರೆಳೆಯುವ 'ಕಸೂತಿಯಮ್ಮ'; ತನ್ನ ಮೈಮಾಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ತಾನು ತೆಗೆದುಕೊಳ್ಳುವ ನಿರ್ಧಾರದಿಂದಾಗಿ ಪೇಚಿಗೊಳಗಾಗುವ ನಿರ್ಮಲಾ- 'ಮೂವತ್ತಾರು ಇಪ್ಪತ್ನಾಲ್ಕು ಮೂವತ್ತಾರು' ; ವೃದ್ಧಾಶ್ರಮದಲ್ಲಿರುವ ವಿವಿಧ ಹಿನ್ನೆಲೆಯಿಂದ ಬಂದ ಮಹಿಳೆಯರನ್ನು ಪರಿಚಯಿಸುವ 'ಪರಕೀಯ'; ತಮ್ಮ ಹಳೆ ನೆನಪುಗಳನ್ನು ಪ್ರತಿನಿಧಿಸುವ ಮನೆ, ಬಾವಿ, ಪರಿಸರ ತಲೆಮಾರುಗಳಿಂದ ತಮ್ಮಲ್ಲಿದ್ದ ವಸ್ತುಗಳ ನಂಟು ಬಿಡಲಾರದೆ ತೊಳಲಾಡುವ ವ್ಯಕ್ತಿಚಿತ್ರಣ ಕಟ್ಟಿಕೊಡುವ 'ಬಾವಿ' ಹೀಗೆ ವೈವಿಧ್ಯಪೂರ್ಣ ವಸ್ತುಗಳನ್ನಾಯ್ದು ಅಷ್ಟೇ ವಿಭಿನ್ನ ಪಾತ್ರಗಳನ್ನು ಕುಶಲತೆಯಿಂದ ನಿರೂಪಿಸುವ ಉಮಾರಾವ್ ಕಥೆಗಳು ಒಂದೇ ಓದಿಗೆ ದಕ್ಕುವಂತವಲ್ಲ.


'ಸಿಲೋನ್ ಸುಶೀಲಾ, ಮೀಸೆ ಹೆಂಗಸು ಮತ್ತು ಇತರರು' ಸಂಕಲನದಲ್ಲಿರುವ 24 ಕಥೆಗಳು ಅತಿ ಸಣ್ಣ ಕಥೆಗಳು. 'ಹಾತುನಿಕಾ ಎಂಬ ಕನಸು' ನಾಯಕ ವಿದೇಶದಲ್ಲಿರುವಾಗ ತನಗೆ ಅವಕಾಶವಿದ್ದರೂ ಪರಸ್ತ್ರೀಯರ ಸಂಗ ಮಾಡದೇ ಇದ್ದುದ್ದನ್ನು ತನ್ನ ಇಳಿವಯಸ್ಸಿನಲ್ಲಿ ನೆನೆಯುತ್ತಾ, ತಾನು ಅಷ್ಟು ಒಳ್ಳೆಯವನಾಗಿರಬೇಕಾದ ಅವಶ್ಯಕತೆಯಿತ್ತೇ? ಎಂದು ಕೊಳ್ಳುತ್ತಾ ತನ್ನ ಸಾಮಿಪ್ಯವನ್ನು ಬಯಸಿದ ಹೆಣ್ಣನ್ನು ನೆನಪಿಸುವ ವರ್ಣನೆಯಿದೆ. 'ಸಿಂಧಿಕಡಿ'ಎನ್ನುವ ಪುಟ್ಟಕಥೆಯ ಮೂಲಕ ದೇಶವಿಭಜನೆಯ ನೋವನ್ನು, ಆ ಕಹಿನೆನಪುಗಳನ್ನು ಮೀರಿ ಬದುಕು ಕಟ್ಟಿಕೊಳ್ಳುವ ಸಾಹಸವನ್ನು ಮಾಡುವವರ, ಅಂಥವರ ಕುರಿತಾದ ಇತರರ ಸಣ್ಣತನದ ವಿವರಣೆ ಅತ್ಯಂತ ಸೂಕ್ಷ್ಮವಾಗಿ ಮೂಡಿದೆ. 'ಮೂಲೆ ಮನೆ' ಕಥೆಯ ನಿರೂಪಕಿ ಜಯಾಳ ತಂದೆ ಅವಳ ಪ್ರಾಯದ ಅವಳ ಕ್ಲಾಸ್ ಮೇಟ್ ಲೀಲಾಳನ್ನು ಮದುವೆಯಾಗಿ ಮೂಲೆಮನೆಯಲ್ಲಿ ಸಂಸಾರ ಹೂಡಿದಂದಿನಿಂದ ಅಪ್ಪನ ಕುರಿತಾದ ದ್ವೇಷ ಅವನ ಸಾವಿನ ವರೆಗೆ ಹೋಗಲಿಲ್ಲ. ಲೀಲಾಳ ಕುರಿತಾಗಿ ಇದ್ದ ದ್ವೇಷ ಅವಳನ್ನು ಕಂಡಾಗ ಏನೂ ಅನ್ನಿಸಲೇ ಇಲ್ಲ ಅದರಲ್ಲೂ 'ಎಷ್ಟು ವರ್ಷ ಕಾದೆ ಜಯಾ. ನೀನು ಬರ್ತೀ.. ನಿಮ್ಮಪ್ಪನ ಜತೆ ಜಗಳ ಆಡ್ತೀ.. ನನ್ನನ್ನು ಹೊರಗೆ ಹಾಕ್ತಿ ಅಂತ. ನೀನೂ ಬರಲಿಲ್ಲ. ನಿನ್ನಮ್ಮನೂ ಬರಲಿಲ್ಲ. ಅದ್ಯಾಕೆ ಹಾಗೆ ಮಾಡಿದೆ. . .'ಎಂಬ ಅವಳ ಮಾತುಗಳನ್ನು ಕೇಳುತ್ತಾ 'ನಮ್ಮಪ್ಪಾನೂ ನಾನು  ಬರ್ತೀನಿ. ಜಗಳ ಆಡ್ತೀನೀಂತ ಕಾಯ್ತಾ ಇದ್ರೋ ಏನೋ!' ಎನ್ನುವ ಮಾತುಗಳು ಅನೂಹ್ಯವಾದ ಭಾವನಾತ್ಮಕ ಜಗತ್ತನ್ನು ಪರಿಚಯಿಸಿ ನಮ್ಮ ಅಂತರಂಗವನ್ನೂ ಕಲಕುತ್ತದೆ. ಹೆಣ್ಣಿಗೆ ಅತ್ಯಂತ ಪ್ರಿಯವಾದ ಉಡುಗೆ ಸೀರೆಯ ಸುತ್ತ ಹೆಣ್ಣಿನ ಬದುಕಿನ ತುಣುಕುಗಳನ್ನು ಪೋಣಿಸಿ ಅವಳ ಮನದ ಆಸೆ-ನಿರಾಸೆಗಳನ್ನು ಕಟ್ಟಿಕೊಡುವ ಬಹಳ ವಿಶಿಷ್ಟವಾದ ಕಥೆ 'ಮೀಸೆ ಹೆಂಗಸು'

‘ಟೇಬಲ್ ಸ್ಪೇಸ್’ ಕಥೆಯನ್ನು ಬಹುಶ ಕನ್ನಡದ ಓದುಗರು ಮುಖ್ಯವಾಗಿ ಐಟಿ ಹಿನ್ನೆಲೆಯ ಬೆಂಗಳೂರಿನ ಓದುಗರು ಸಧ್ಯ ಅರ್ಥೈಸಿಕೊಳ್ಳಬಹುದು; ಸ್ಪಂದಿಸಬಹುದು. ‘..ಮುಂಬೈ ಒತ್ತಡ, ಸ್ಪರ್ಧಾತ್ಮಕ ಶೈಲಿಯ ಬದುಕಿನ ಜಂಝಾಟದಲ್ಲಿ ಹೋರಾಡಿ ಒಂದೊಂದಾಗಿ ತಮ್ಮ ಕನಸುಗಳನ್ನು ಕೈಬಿಡಲು ಅವರಿಗೆ ಹೆಚ್ಚು ಕಾಲ ಬೇಕಾಗುತ್ತಿರಲಿಲ್ಲ.’(ಪುಟ348) ಕನಸು ಮುರಿಯುವುದು ಅದನ್ನು ಪುನಃ ಕಟ್ಟುವುದೇ ಬದುಕಿನ ವಿನ್ಯಾಸ ಈ ಮಹಾನಗರದಲ್ಲಿ. ವಸತಿ ಸಮಸ್ಯೆಯಂತೆಯೇ ಆಫೀಸುಗಳಿಗಾಗಿ ಜಾಗ ಹೊಂದಾಣಿಸುವ ತಾಕಲಾಟಗಳು, ಅಲ್ಲಿ ಕೆಲಸಮಾಡುವವರ ಮನಸ್ಥಿತಿ ಎಲ್ಲವನ್ನೂ ಬಹಳ ಸಹಜತೆಯಿಂದ ನೈಜ್ಯತೆಯಿಂದ ವಸ್ತುನಿಷ್ಠವಾಗಿ ಚಿತ್ರಿಸಿದ್ದಾರೆ. ‘ಕಾಯಕವೇ ಕೈಲಾಸ’ವೆಂದು ಮುಂಬಯಿಯನ್ನು ನೆಚ್ಚಿಕೊಂಡವರಿಗೆ ಇದು ದಿನನಿತ್ಯದ ಗೋಳು.

‘ಓಪಿಡಿ’, ‘ಬೆತ್ತಲೆ’,‘ಲೈಫ್ಲು ಇಷ್ಟೇನೇ’, ‘ಐದನೆಯ ಗೋಪುರ’ ‘ಬ್ಯೂಟಿ ಪಾರ್ಲರಿನಲ್ಲೊಂದು ಮಧ್ಯಾಹ್ನ’, ‘ನಗು’ ಇತ್ಯಾದಿ ಕಥೆಗಳಲ್ಲಿ ಉಮಾರಾವ್ ನೀಡುವ ತುಣುಕು ವಿವರಗಳಲ್ಲಿ ಅಡಕವಾಗಿರುವ ನಗರಪ್ರಜ್ಞೆ ಅಗಾಧವಾದುದು.

‘ಫಲ್ ಫಲ್ ಫಲ್..’ಎನ್ನುತ್ತಾ ಪುಟ್ಟಪುಟ್ಟ ಹೆಜ್ಜೆಗಳನ್ನಿಡುತ್ತಾ ಉರಿಬಿಸಿಲಿನಲ್ಲಿ ತಂದೆಯ ತರಕಾರಿಯ ಗಾಡಿಯ ಬದಿಯಲ್ಲಿ ಒಂಟಿಕಾಲಲ್ಲಿ ನಿಲ್ಲುವ ಬಾಲಕಿಯು ದಾರಿಬದಿಯಲ್ಲಿದ್ದ ಏಸಿ ಬಸ್ಸಿನೊಳಗೆ ಹತ್ತಿ ಅಲ್ಲಿಯ ಕಲ್ಪನಾತೀತ ಅನುಭವವನ್ನು ಕ್ಷಣಮಾತ್ರವಾದರೂ ತನ್ನದಾಗಿಸುವ ಚಿತ್ರಣದಿಂದ ಹಿಡಿದು ‘ನನಗೆ ಸಂಸ್ಕೃತಿಗಿಂತ ಬದುಕು ಮುಖ್ಯ’ ಎನ್ನುತ್ತಾ ನಮ್ಮ ರೂಢಿಗತ ವಿವಾಹದ ಚೌಕಟ್ಟನ್ನು ಧಿಕ್ಕರಿಸಿ ಲಿವ್ಇನ್ ರಿಲೇಶನ್‌ಶಿಪ್‌ನಲ್ಲಿರುವ ನಿರ್ಧಾರ ತೆಗೆದುಕೊಳ್ಳುವುದನ್ನು ಮುಕ್ತವಾಗಿ ತಾಯಿಯೊಂದಿಗೆ ಹೇಳಿಕೊಳ್ಳುವ ಧೈರ್ಯ ತೋರುವ ದಿಟ್ಟತನದ ಸ್ತ್ರೀಲೋಕವನ್ನು ಅನಾವರಣಗೊಳಿಸಿದ್ದಾರೆ. ಅವರು ಕಟ್ಟಿಕೊಡುವ ಸ್ತ್ರೀಲೋಕದಲ್ಲಿ ಕಪ್ಪುಬ್ರಾ ಯಾಕೆ ಹಾಕಬಾರದೆಂದು ಪ್ರಶ್ನಿಸುವ ಹುಡುಗಿ, ತನ್ನ ಮೈಮಾಟ ಹೆಚ್ಚಿಸಲು ಶಸ್ತ್ರಕ್ರಿಯೆ ಮಾಡಿಸಿಕೊಳ್ಳುವ, ಗಂಡನನ್ನು ಮೆಚ್ಚಿಸಲು ಬ್ಯೂಟಿ ಪಾರ್ಲರ್ ಗೆ ಭೇಟಿ ನೀಡುವ ಸ್ತ್ರೀಯರು, ಮಗನಿಗೆ ಏಡ್ಸ್ ಹೇಗಾಯಿತು ಎನ್ನುವುದನ್ನು ಚಿಂತಿಸುವುದಕ್ಕಿಂತ ಅದನ್ನು ಧೈರ್ಯದಿಂದ ಸ್ವೀಕರಿಸಿ, ‘. . ನಮಗೆ ಇವತ್ತು ಮುಖ್ಯ. ನಾಳೆಯನ್ನು ಧೈರ್ಯವಾಗಿ ಎದುರಿಸುವುದು ಮುಖ್ಯ. ವಿ ವಿಲ್ ಫೈಟ್ ಇಟ್ ಟುಗೆದರ್..’ ಎನ್ನುವ ಆಧುನಿಕ ಪ್ರಗತಿಪರ ತಾಯಿ ಹೀಗೆ ಬಹಳ ಸಶಕ್ತ ಮಹಿಳಾಲೋಕವನ್ನು ಸಾಹಿತ್ಯಜಗತ್ತಿಗೆ ಪರಿಚಸುತ್ತಾರೆ. ಉಮಾರಾವ್ ಅವರ ಮಹಿಳೆಯರು ಸದಾ ತಮ್ಮ ಕನಸು ನನಸಾಗುವ ನಿರೀಕ್ಷೆಯಲ್ಲಿ ಅಥವಾ ಕಳೆದುದನ್ನು ಪಡೆದುಕೊಳ್ಳುವ ಶೋಧದಲ್ಲಿರುವುದನ್ನು ಕಾಣಬಹುದು.

ಇಂಥಹ ವೈವಿಧ್ಯಪೂರ್ಣ ಮಹಿಳಾಜಗತ್ತನ್ನು ಪರಿಚಯಿಸಿದ ಉಮಾರಾವ್ ಅವರ ಕಥೆಗಳು ಸ್ತ್ರೀಯರಿಗೇ ಸೀಮಿತವಾದುದಲ್ಲ. ಅವರು ಅಭಿವ್ಯಕ್ತಿಸಲು ಬಯಸುವ ಸಂವೇದನೆ ಸ್ತ್ರೀ–ಪುರುಷರಿಬ್ಬರಿಗೂ ಅನ್ವಯಿಸುವಂತದ್ದು. ಮಾನವೀಯ ಜಗತ್ತಿಗೇ ಸಂಬಂಧಿಸಿದ್ದು. ಆದುದರಿಂದಲೇ ‘ಕಡಲ ಹಾದಿ’ಯ ಸೋನಿ ‘ರೋಡೋಡೆಂಡ್‌ರಾನ್ ಕಥೆಯ ಶಾಲಿನಿ, ‘ನನ್ನಮ್ಮ ಎಲ್ಲರಂತಲ್ಲ’ ದ ಅಮ್ಮ, ‘ಪಯಣಿಗರು’ ಕಥೆಯ ರಕ್ಷಾಳಂತೆಯೇ ‘ಅಗಸ್ತ್ಯ’, ‘ದೇಹಾಂತ’ ದ ರಾಜೀವ, ‘ಬೆತ್ತಲೆ’ಯ ದಿಲೀಪ, ‘ಅಂತರ್ಜಾಲ’ದ ರಂಗಯ್ಯ, ‘ಚಾರ್ಲಿ’ ಕಥೆಯ ಸರ್ಕಸ್ಸಿನ ಕುಳ್ಳ, ‘ಬಾವಿ’ ಯ ರಾಮನಾಥ, ‘ಟೆಬಲ್ ಸ್ಪೇಸ್’ ನ ಗೋಪಿ ಪ್ರಸಾದ್ ರಂತಹ ಅನನ್ಯ ವ್ಯಕ್ತಿಗಳನ್ನು ತಮ್ಮ ಕಥೆಗಳ ಮೂಲಕ ಸದಾಕಾಲ ಜೀವಂತವಾಗಿರಿಸಿದ ಶ್ರೇಯಸ್ಸು ಇವರದ್ದು. ಕನ್ನಡ ಕಥಾಸಾಹಿತ್ಯವನ್ನು ಗಮನಿಸಿದರೆ ಇತರ ಮಹಿಳಾ ಕಥೆಗಾರ್ತಿಯರು ಅನುಸರಿಸುವ ಸಿದ್ಧ ಮಾದರಿಯ ದಾರಿಯನ್ನು ಬಿಟ್ಟು ತಮ್ಮದೇ ಮಾರ್ಗವನ್ನು ನಾಲ್ಕು ದಶಕಗಳ ಹಿಂದೆಯೇ ಕಂಡುಕೊಂಡ ಉಮಾರಾವ್ ಅವರು ಅನನ್ಯವಾದ ಕಥೆಗಳಲ್ಲಿ ನಗರಪ್ರಜ್ಞೆಯನ್ನು ವಿವಿಧ ಮಗ್ಗಲುಗಳಲ್ಲಿ ಶೋಧಿಸುವ ಪ್ರಯತ್ನ ನಡೆಸಿ ಕನ್ನಡ ಕಥಾಸಾಹಿತ್ಯವನ್ನು ಶ್ರೀಮಂತಗೊಳಿಸಿರುವ ಯಶಸ್ವಿ ಮಹಿಳಾ ಕಥೆಗಾರರು. ಕನ್ನಡದ ಆಧುನಿಕ ಕಥೆಗಾರರಿಗೆ ಸರಿಸಾಟಿಯಾಗಬಲ್ಲ ಕಥನಕೌಶಲ್ಯ, ನಿರೂಪಣಾ ಶೈಲಿ, ವಸ್ತುವೈವಿಧ್ಯತೆ, ಪ್ರಯೋಗಶೀಲಾತ್ಮಕವಾದ ತಂತ್ರ, ಕನ್ನಡಕ್ಕೇ ವಿಶಿಷ್ಟವಾದ ವಸ್ತುಗಳನ್ನೊಳಗೊಂಡ ಆಧುನಿಕ ಜಗತ್ತಿನ ತಲ್ಲಣಗಳನ್ನು ಅತ್ಯಂತ ಕಿರಿದಾದ ಚೌಕಟ್ಟಿನಲ್ಲಿ ಅಷ್ಟೇ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟ ಏಕೈಕ ಮಹಿಳಾ ಕಥೆಗಾರರೆಂದು ಗುರುತಿಸಿಕೊಳ್ಳುತ್ತಾರೆ.





**Quickies 1)** There is Green house. Inside a green house there was White house. Inside the White house there was a Red house and inside a red house there were many babies. What am I talking about ?

**Quickies 2)** When you have me you immediately feel like sharing me. But if you do share me, you do have me. What is it ?000


**Quickies 3)** What English word retains the same pronunciation, even after you take away four of its five letters. Which word is it ?

### Word Puzzles

From wherever you start (hint: it's probably easiest to start at the top left), join the hexagons by creating a new word that is only one letter different from where you started. Each hexagon must connect to exactly two adjacent hexagons.




### Rebus Puzzles




### Identify the letter beginning and ending with same letter:

1)_MENESI_ 2) _ALORI_ 3) _IVIDE_ 4) _ERI_ 5) _OIN_ 6) _IG _ 7) _AYA_ 8) _ARS_ 9) _AXIMU_ 10) _EO_ 11) _RENG_ 12) _EFRIGERATO_ 13) _ELL_ 14) _ARO_ 15) _ILLO_ 16) _ERO_ 17) _EARL_ 18) _EPORTE_ 19) _EDIU_ 20) _NOC_ 21) _INDO_

## ANSWERS TO THE LAST MONTH QUIZZES

**Quickies 1) "D" Each letter represents one note in the diatonic musical scale: DO, RE, ME, FA, SO, LA, TI DO.**
**Quickies 2) "I.T.S." The complete sequence is the first letter of every word in the sentence.**
**Quickies 3) "OPPORTUNITY".**

**Word puzzle: Man overboard, Big Baby, Bear in the wood, Dive in the pool, Too funny for words, Big head, Reverse glance, Downhill, Inside job, Broken promise, Long legs, Little league, Lost in space, Knock on wood, Playing outside, Pretty please.**

**Identify the words beginning and ending with same letter: 1) Civic 2) Trust 3) widow 4) Aroma 5) Museum 6) Bathtub 7) Erase 8) Typist 9) Teapot 10) Cardiac 11) Xerox 12) Render 13) Throat 14) Oregano 15) Yummy 16) Toilet 17) Comic 18) Label 19) Clinic 20) Twist.**

**Compiled by Ananth Banwasi**

# Few more strides before the centenary



✍ M.A.N. Prasad

## Inauguration of the auditorium

The 16th of September 1999, being an auspicious day, was chosen for doing Vastu Shanthi Pooja for the auditorium, lifts and stage. Senior members of the association did the Pooja. A start was made for the use of the stage by singing prayers to Lord Ganesha. It was a pleasure to watch three generation of members on the stage.



Now that the auditorium was ready, we needed to formally inaugurate it. 16th October of the year 1999 was chosen as the date for inauguration and Governor of Maharashtra His Excellency P.C. Alexander was requested to kindly inaugurate. The Governor's office confirmed that the governor will attend the function and inaugurate.



We got busy with the arrangements. Since the governor had agreed to inaugurate, we did not think of any other V.I.P to be a part of the affairs. It was decided that this was a good occasion to honour some of the senior members who have contributed to the growth of theatre activity in the Association.

The exterior of the building was painted and the compound wall was clad with Agra red stone. It was also provided with fencing. Suitable lighting of the building and the compound yard was completed.

The Governor wanted to know about Karnataka. He asked if we have books which could provide the necessary information. We had such books in our library and we sent those books to governor's office.

That year there was elections in Maharashtra and Shiva Sena and Bharatiya Janata Party together were poised to form the government. They had a meeting with the Governor the evening prior to our inauguration. The meeting was inconclusive and got extended to the next day. We all thought that the Governor will cancel attending our function. We had not invited any other guest for the event. We did not know what to do.




The next day, at around eleven in the morning, I get a call from ADC of the Governor that the Governor has cancelled all engagements but he is attending our function. You have to reschedule the function and keep it brief. Governor will just inaugurate and speak a few words. That was a great relief. But with the political situation as it was, things were uncertain.

That evening we all were anxiously waiting to know any positive signs of the Governors coming. Police officers at the association were getting updates of Governor's movement. At 10 minutes to 6.00 p.m., one of them said that the governor has not yet left his place. After two minutes, another officer said that the Governor is on the way and is near Siddivinayak. We had a sigh of relief.

At 6.00 p.m. sharp, the governor arrived at the Association. As soon as we took our places on the dais Governor's ADC pushed a slip into my hands which said "complete everything in 10 minutes". The inaugural function went on for more than half an hour, as after lighting the lamp the governor spoke for more than twenty minutes.



After the Governor left, the function continued. There was a classical Carnatic concert by Vidwan R.K.Srikantan. The function was a grand success.

As a first event in our new auditorium, we had organized a Girish Karnad Theatre Festival. The unique feature of this festival was that it was multilingual and multi locational. Theatre groups from Karnataka and Maharashtra participated in the festival. Repeat shows were held in various suburbs of Mumbai. The Theatre Festival was a grand success.

With a grand inauguration and a grand drama Festival our auditorium got a good start to it.

# Who is Shiva: Man, Myth or Divine?

Shiva refers to both “that which is not,” and Adiyogi because in many ways they are synonymous. Explore the stories and legends that surround this most prominent figure of Indian spiritual traditions.

Meaning of Shiva: When we say “Shiva,” there are two fundamental aspects that we are referring to. The word “Shiva” means literally, “that which is not.”

**Shiva is Nothingness:** Today, modern science is proving to us that everything comes from nothing and goes back to nothing. The basis of existence and the fundamental quality of the cosmos is vast nothingness. The galaxies are just a small happening – a sprinkling. The rest is all vast empty space, which is referred to as Shiva. That is the womb from which everything is born, and that is the oblivion into which everything is sucked back. Everything comes from Shiva and goes back to Shiva.

**Shiva is Darkness:** So, Shiva is described as a non-being, not as a being. Shiva is not described as light, but as darkness. Humanity has gone about eulogizing light only because of the nature of the visual apparatus that they carry. Otherwise, the only thing that is always, is darkness. Light is a limited happening in the sense that any source of light – whether a light bulb or the sun – will eventually lose its ability to give out light. Light is not eternal. It is always a limited possibility because it happens and it ends. Darkness is a much bigger possibility than light. Nothing needs to burn, it is always – it is eternal. Darkness is everywhere. It is the only thing that is all pervading.

But if I say “divine darkness,” people think I am a devil worshiper or something. In fact, in some places in the West it is being propagated that Shiva is a demon! But if you look at it as a concept, there isn’t a more intelligent concept on the planet about the whole process of creation and how it has happened. I have been talking about this in scientific terms without using the word “Shiva” to scientists around the world, and they are amazed, “Is this so? This was known? When?” We have known this for thousands of years. Almost every peasant in India knows about it unconsciously. He talks about it without even knowing the science behind it.

**Meaning of Adiyogi - The First Yogi:** On another level, when we say “Shiva,” we are referring to a certain yogi, the Adiyogi or the first yogi, and also the Adi Guru, the first Guru, who is the basis of what we know as the yogic science today. Yoga does not mean standing on your head or holding your breath. Yoga is the science and technology to know the essential nature of how this life is created and how it can be taken to its ultimate possibility.

This first transmission of yogic sciences happened on the banks of Kanti Sarovar, a glacial lake a few miles beyond Kedarnath in the Himalayas, where Adiyogi began a systematic exposition of this inner technology to his first seven disciples, celebrated today as the Sapta Rishis. This predates all religion. Before people devised divisive ways of fracturing humanity to a point where it seems almost impossible to fix, the most powerful tools necessary to raise human consciousness were realized and propagated.

**One and the same:** So “Shiva” refers to both “that which is not,” and Adiyogi, because in many ways, they are synonymous. This being, who is a yogi, and that non-being, which is the basis of the existence, are the same, because to call someone a yogi means he has experienced the existence as himself. If you have to contain the existence within you

even for a moment as an experience, you have to be that nothingness. Only nothingness can hold everything. Something can never hold everything. A vessel cannot hold an ocean. This planet can hold an ocean, but it cannot hold the solar system. The solar system can hold these few planets and the sun, but it cannot hold the rest of the galaxy. If you go progressively like this, ultimately you will see it is only nothingness that can hold everything. The word “yoga” means “union.” A yogi is one who has experienced the union. That means, at least for one moment, he has been absolute nothingness.

When we talk about Shiva as “that which is not,” and Shiva as a yogi, in a way they are synonymous, yet they are two different aspects. Because India is a dialectical culture, we shift from this to that and that to this effortlessly. One moment we talk about Shiva as the ultimate, the next moment we talk about Shiva as the man who gave us this whole process of Yoga.

**Who Shiva is Not! :** Unfortunately, most people today have been introduced to Shiva only through Indian calendar art. They have made him a chubby-cheeked, blue-colored man because the calendar artist has only one face. If you ask for Krishna, he will put a flute in his hand. If you ask for Rama, he will put a bow in his hand. If you ask for Shiva, he will put a moon on his head, and that’s it!

Every time I see these calendars, I always decide to never ever sit in front of a painter. Photographs are all right – they capture you whichever way you are. If you look like a devil, you look like a devil. Why would a yogi like Shiva look chubby-cheeked? If you showed him skinny it would be okay, but a chubby-cheek Shiva – how is that?

In the yogic culture, Shiva is not seen as a God. He was a being who walked this land and lived in the Himalayan region. As the very source of the yogic traditions, his contribution in the making of human consciousness is too phenomenal to be ignored. Every possible way in which you could approach and transform the human mechanism into an ultimate possibility was explored thousands of years ago. The sophistication of it is unbelievable. The question of whether people were so sophisticated at that time is irrelevant because this did not come from a certain civilization or thought process. This came from an inner realization. This had nothing to do with what was happening around him. It was just an outpouring of himself. In great detail, he gave a meaning and a possibility of what you could do with every point in the human mechanism. You cannot change a single thing even today because he said everything that could be said in such beautiful and intelligent ways. You can only spend your lifetime trying to decipher it.

**Shiva’s Blue Throat:** One of the many names that Shiva – the Adiyogi is known by is Neelakantha or the one with the blue throat. Sadhguru explains the symbolism behind Shiva’s blue throat.

**What is the symbolism of Shiva’s blue throat?**

There is a story in the Yogic lore. There was an ongoing conflict between the gods and the demons. When repeated conflicts happened and many were being killed, they

decided to bring forth the elixir of life or the amrutha, which was hidden in the oceans and share it among them so that both of them will become immortal and they can fight joyfully. War is a terrible business only because it causes much death. If death is handled, then war is quite a wonderful thing.

They got into a partnership and decided to churn the oceans. The legend goes on to say that they pulled out a certain peak called Meru and used a huge snake as a rope to churn it. Initially, when they started churning, instead of amrutha or the elixir of life, a deadly poison came out from the bottom of the ocean. This was known as halahal. This deadly poison came up in huge quantities. All the gods got scared, that if this much poison comes out, it will destroy the whole world. And there was no one who could do anything about this.

As usual, when no one is willing to doing anything about it, they thought Shiva would be the right guy. They asked Shiva to come and showed him the enormous amount of poison coming out. “If this spreads, it will destroy life. You must do something.” As usual, without any concern about his own well-being, he simply drank up the poison. His wife Parvati saw this and she went and held his throat, so it all stopped at his throat and his throat became all blue.

**The Poison of Prejudice and Symbolism of Shiva’s Blue Throat:**



This is a very significant story. This is true with every human being. If you bore deep enough into every human being, there is only one thing, an ever-expanding life. If they get identified with that, their mind and emotions would also function like that. But if you touch them on the surface, this is a woman, this is a man, this is an American, this is an Indian and so many things. This prejudice is poison. When they churned on the surface, the world's poison comes out. Everyone ran away from the poison because no one wants to touch poison. Shiva drank up the world's poisons and it stopped right there at his throat. If it had gone in, he would have been poisoned. But it stopped at his throat, so that he can spit it out anytime he wants. If it is in your throat, you can spit it out. If it enters your system, you cannot take it out. Right now, your nationhood, gender, family, genetic identities, racial identities, religion, have not stopped at your throat. They have gone into every cell in your body. The thing is to churn it up, so that it all comes up and you can spit it out and live here just as a piece of life.

This is the symbolism of Shiva having a blue throat. He stored the world's poisons in his throat, ready to spit it out when it has to be taken out. If it went into his body, then there would be no way to take it out. The entire spiritual process in a way, is to churn so that all your prejudices come up and one day we can make you spit it out. If it is deep down, how to take it out? If I try to take out one of your prejudices, in your experience it feels like your life is being taken out. If I try to take away your identities with your gender, children, parents or nation, it feels like your life is being taken out. No, only the poison of prejudice is being taken out. So, it is time to spit out the poison of prejudice.


## Matrimonial

Alliance invited for a Madhwa Kannada Brahmin Boy, DOB: 1st July 1989. Time: 1:55 pm. Place: Mumbai, Gotra: Kaushika, Nakshatra: Rohini, Rashi: Vrushabha, Height: 5 ft 10". Qualification: B.E, MBA working at PRACTUS Mumbai.
Contact: Mrs. Saroja Rao, Contact number: 9920343514
Email: sarojarao226@gmail.com

# ನೇಸರು ಜಾಗತಿಕ ನಾಟಕ ರಚನಾ ಸ್ಪರ್ಧೆಯ ಬಹುಮಾನ ವಿತರಣಾ ಸಮಾರಂಭ

ಮೇ 28, 2023 ಭಾನುವಾರ ಸಂಜೆ 6.00ಕ್ಕೆ ಸರಿಯಾಗಿ ಬಹುಮಾನ ವಿತರಣಾ ಸಮಾರಂಭ ಜರುಗಿತು. ಸಮಾರಂಭವನ್ನು ವ್ಯವಸ್ಥಿತವಾಗಿ ನಡೆಸಲು ಶ್ರೀ ಅಶ್ವಿನ್ ವಸಿಷ್ಠ ಅವರು ಕೈಗೊಂಡು, ಮೊದಲಾಗಿ ಎಲ್ಲರನ್ನು ಸ್ವಾಗತಿಸಲು ಅಸೋಸಿಯೇಷನ್‌ನ ಅಧ್ಯಕ್ಷರಾದ ಶ್ರೀಮತಿ ಕಮಲಾರವರನ್ನು ಕೋರಿದರು. ಶ್ರೀಮತಿ ಕಮಲಾರವರು ನಡೆದ ಎಲ್ಲಾ ರಂಗಾಸಕ್ತರನ್ನು ಆದರದಿಂದ ಸ್ವಾಗತಿಸಿ ಅಂದು ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಶ್ರೀಮತಿ ಅಹಲ್ಯ ಬಲ್ಲಾಳ್ ಅವರನ್ನು ಹೂ ಗೊಂಚಲು, ಬಣ್ಣದ ಹೊದಿಕೆಯೊಂದಿಗೆ ಸ್ವಾಗತಿಸಿದರು. ನೇಸರು ಸಣ್ಣ ಕಥೆಗಳ, ಕವಿತೆಗಳ, ನಾಟಕಗಳ ರಚನಾ ಸ್ಪರ್ಧೆಯನ್ನು ವರ್ಷ ವರ್ಷಗಳಿಂದ ಜರುಗಿಸುತ್ತಿದ್ದು ಈ ಬಾರಿ ಎಲ್ಲೆಡೆಯಿಂದ 39 ನಾಟಕಗಳು ಸ್ಪರ್ಧೆಯಲ್ಲಿ ಸೇರಿದ್ದವು. ಕವಿತೆಗಳು ಸಣ್ಣ ಕಥೆಗಳನ್ನು ರಚಿಸುವುದು ಎಷ್ಟು ಕಷ್ಟ ಸಾಧ್ಯವೋ ಅದಕ್ಕಿಂತ ನೂರರಷ್ಟು ನಾಟಕ ರಚನೆ ಕಷ್ಟ ಸಾಧ್ಯ ಎಂದರು. ಬಂದ ನಾಟಕಗಳಲ್ಲಿ ಆರಿಸಿದ ನಾಟಕಗಳಿಗೆ ಇವತ್ತು ಬಹುಮಾನವನ್ನು ನೀಡುತ್ತಿದ್ದೇವೆ. ಅವರೆಲ್ಲರಿಗೂ ಸ್ವಾಗತವನ್ನು ಕೋರುತ್ತೇವೆ ಎಂದರು.





ನಂತರ ಸಹ ಕಾರ್ಯದರ್ಶಿ, ಶ್ರೀ ನವಿಲೇಕರ್ ಅವರು ಮಾತನಾಡಿ ಅಸೋಸಿಯೇಷನ್ ಬಹು ಕಾಲದಿಂದ ನಾಟಕಗಳನ್ನು ಪ್ರದರ್ಶಿಸುತ್ತಾ ಬಂದಿದೆ. ಇಂದು ಆ ಚಟುವಟಿಕೆಗೆ 97 ವರ್ಷ ಸಂದಿದೆ. ಇನ್ನು ಮೂರು ವರ್ಷಗಳಲ್ಲಿ ನಾವು ನೂರು ವರ್ಷವನ್ನು ದಾಟಲಿದ್ದೇವೆ ಎಂದರು. ಆನಂತರ ಮೂರನೆಯ ಬಹುಮಾನ ಸ್ವೀಕರಿಸಲೋಸುಗ ಶ್ರೀಮತಿ ರಾಜಶ್ರೀ ರೈ ಅವರನ್ನು ರಂಗದ ಮೇಲೆ ಬರಮಾಡಿಕೊಂಡು ಹೂ ಗೊಂಚಲು ರಂಗ ಹೊದಿಕೆಯಿಂದ ಗೌರವಿಸಿ ಬಹುಮಾನವನ್ನು ಇತ್ತರು.

ನಂತರ ಎರಡನೆಯ ಬಹುಮಾನ ಸ್ವೀಕರಿಸಲು ಶ್ರೀಮತಿ ವಿನುತಾ ಹಂಚಿನಮನೆ ಯವರನ್ನು ಬರಮಾಡಿಕೊಂಡು ಗೌರವಿಸಿ ಎರಡನೆಯ ಬಹುಮಾನವನ್ನು ಇತ್ತರು. ಕಡೆಯದಾಗಿ ಮೊದಲ ಬಹುಮಾನಕ್ಕಾಗಿ ಶ್ರೀ ರಘುನಂದನ್ ಅವರನ್ನು ರಂಗದ ಮೇಲೆ ಬರಮಾಡಿ ಕೊಂಡು ಗೌರವಿಸಿ ಅಧ್ಯಕ್ಷರು ಸಭಾಧ್ಯಕ್ಷರು ಕೂಡಿ ಬಹುಮಾನವನ್ನು ಇತ್ತರು.

ಆಮೇಲೆ ಸಭಾಧ್ಯಕ್ಷತೆಯನ್ನು ವಹಿಸಿದ್ದ ಪ್ರಸಿದ್ಧ ರಂಗಕರ್ಮಿ ಶ್ರೀಮತಿ ಅಹಲ್ಯಾ ಬಲ್ಲಾಳ್‌ವರು ಮಾತನಾಡುತ್ತಾ ಈ ಬಾರಿ ಬಂದಿದ್ದ 39 ನಾಟಕಗಳಲ್ಲಿ ಕೇವಲ 10 ನಾಟಕಗಳನ್ನು ಆರಿಸುವುದು ಕಷ್ಟ ಸಾಧ್ಯದ ಕೆಲಸ. ಕಾರ್ನಾಡರು ಹೇಳಿದಂತೆ ನಾಟಕದಲ್ಲಿ ಪ್ರತಿಯೊಂದು ಕೆಲಸವು ತನ್ನತನದಲ್ಲಿ ಹೊತ್ತಿನಲ್ಲಿ ಇದ್ದರೆ ಮಾತ್ರ ನಾಟಕವಾಗುತ್ತದೆ. ಪಾತ್ರಗಳು ಏನು ಎಲ್ಲಿ ಸೇರಬೇಕು ಮಾತನಾಡಬೇಕು ಎನ್ನುವುದನ್ನು ನಾಟಕಕಾರ ಸರಿಯಾಗಿ ತೀರ್ಮಾನಿಸಬೇಕಾಗುತ್ತದೆ. ಅದನ್ನು ಮತ್ತೆ ರಂಗದ ಮೇಲೆ ಬರೆಯುವುದು ನಿರ್ದೇಶಕನ ಕೆಲಸವಾಗುತ್ತದೆ. ಹೀಗೆ ಹೆಣೆದರೆ ಮಾತ್ರ ನಾಟಕದ ಚಿತ್ರ ನೋಡುಗರ ಮನ ಮುಟ್ಟುತ್ತದೆ. ಈ ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ನಾಟಕ ಕಾರರಿಗೂ ನನ್ನ ಅಭಿನಂದನೆಗಳು, ಈ ರಂಗ ಕೆಲಸ ಮುಂದುವರಿಯಲಿ ಎಂದರು.





ಆನಂತರ ಬಹುಮಾನ ವಿಜೇತರಾದ ಶ್ರೀ ರಘುನಂದನ್, ಶ್ರೀಮತಿ ವಿನುತಾ ಹಂಚಿನ ಮನೆ ಮತ್ತು ಶ್ರೀಮತಿ ರಾಜಶ್ರೀ ರೈರವರು ತಮ್ಮ ಅನಿಸಿಕೆಗಳನ್ನು ನೆರೆದವರೊಡನೆ ಹಂಚಿಕೊಂಡರು.

ಆಮೇಲೆ ಶ್ರೀ ರಘುನಂದನ್‌ರವರೇ ಬರೆದ "ಚಿಟ್ಟೆ" ನಾಟಕದಲ್ಲಿ ಏಕ ಪಾತ್ರಾಭಿನಯದಲ್ಲಿ ಕುಮಾರ ಗೋಕುಲ ಸಹೃದಯ 1 ಗಂಟೆ 10 ನಿಮಿಷಗಳ ಕಾಲ ತನ್ನ ಅಭಿನಯದಿಂದ ನೆರೆದ ನೋಡುಗರ ಮನವನು ಸೂರೆಗೊಂಡು ಅವರೆಲ್ಲರ ಮೆಚ್ಚುಗೆಗೆ ಗುರಿಯಾದ. ಕುಮಾರ ಗೋಕುಲ ಸಹೃದಯನನ್ನು ಮುದ್ದಿನಿಂದ ಗೌರವಿಸುತ್ತಾ ಡಾ. ಮಂಜುನಾಥ್‌ರವರು ಕನ್ನಡ ನಾಟಕಗಳ ಬಗ್ಗೆ ಮಾತನಾಡುತ್ತಾ ಈಗಿನ ನಾಟಕಗಳು ಭಾರತೀಯ ಪರಂಪರೆಯನ್ನು ಹಿಂಬಾಲಿಸದೆ ಬರ್ನಾಡ್ಶಾ ಅವರ ನಾಟಕಗಳನ್ನೇ ಅನುಸರಿಸಿ ಕೇವಲ ಮಾತೇ ನಾಟಕ ಎಂದು ಮಾಡಿದ್ದಾರೆ. ನಾಟಕಗಾರರು ನಾಟಕದಲ್ಲಿ ಸಂಗೀತ ಕುಣಿತವನ್ನು ಸೇರಿಸಿದಾಗ ಅದು ಭಾರತೀಯವಾಗುತ್ತದೆ. ಈ ನಿಟ್ಟಿನಲ್ಲಿ ಕನ್ನಡ ರಂಗ ಭೂಮಿ ಮುನ್ನಡೆಯಬೇಕು ಎಂದರು.

ಆನಂತರ ಶ್ರೀ ಶಶಿಕಾಂತ್ಜೋಶಿ ಅವರು ವಂದನಾರ್ಪಣೆಯನ್ನು ಮಾಡುತ್ತಾ ಇಂದು ಬಂದ ಹಿರಿಯ ಸಾಹಿತಿ ಡಾ. ಜಿ. ವಿ. ಕುಲಕರ್ಣಿ ಹಾಗೂ ಡಾ. ಉಷಾ ದೇಸಾಯಿ ಅವರಿಗೂ ವಂದನೆಗಳನ್ನು ಸಲ್ಲಿಸಿದರು.

ಕಿಕ್ಕಿರಿದ ಸಭೆಯಲ್ಲಿ ನಗು, ಹಿಗ್ಗು ಮಾತುಗಳು ಕೂಡಿದ್ದು ಕಾರ್ಯಕ್ರಮ ಚೆನ್ನಾಗಿ ಮೂಡಿ ಬಂತು, ಆಮೇಲೆ ಮೇಲಂಚಿನಲ್ಲಿ ಸವಿಯೂಟದೊಂದಿಗೆ ಸಂಜೆ ಮುಗಿತು. ಐಪಿಎಲ್ ಇದ್ದರೂ ಬಂದು, ನೆರೆದ ಮಂದಿಗೆ ಅಸೋಸಿಯೇಷನ್ ಚಿರಋಣಿ.

ಛಾಯಾಚಿತ್ರ: –ಎಚ್ಚಾರೆಲ್ (ವೆಂಕಟೇಶ)

# ಮೈಸೂರು ಅಸೋಸಿಯೇಶನ್‌ನಲ್ಲಿ ರಂಜಿಸಿದ ಗೋಕುಲ ಸಹೃದಯ ಅವರ "ಚಿಟ್ಟೆ" ಏಕವ್ಯಕ್ತಿ ಕನ್ನಡ ನಾಟಕ

ಕಲಾಭಿಮಾನಿಗಳಿಗೆ ಅಪೂರ್ವ ಅನುಭವ

ಮಕ್ಕಳ ರಂಗಭೂಮಿಯಲ್ಲಿ ಇದೊಂದು ಹೊಸ ಪ್ರಯೋಗ. ಇಂಥಹ ಪ್ರಯೋಗಗಳು ತುಂಬಾ ವಿರಳ. ದೇಶದ ಎಲ್ಲ ಭಾಷೆಯನ್ನು ತಗೊಂಡರೂ ಚಿಟ್ಟೆ ಪ್ರಯೋಗ ಒಂದು ದಾಖಲೆ ನಿರ್ಮಿಸಿದೆ. ಸದ್ಯದಲ್ಲೇ ನೂರನೇ ಪ್ರದರ್ಶನ ಕಾಣಲಿದೆ. ಇನ್ನೊಂದು ಖುಷಿಯ ವಿಷಯ ಅಂದರೆ ರಂಗಭೂಮಿ ಕಡೆ ಮಕ್ಕಳು ಹೆಜ್ಜೆ ಹಾಕಿದ್ದು ಮುಂದಿನ ಪೀಳಿಗೆಗೆ ಒಂದು ದೊಡ್ಡ ಅಡಿಪಾಯ. ಆ ಕಂದನ ಆಸಕ್ತಿ ಸ್ಟೇಜ್ ಮೇಲಿನ ಪ್ರೀತಿ, ಹೆಮ್ಮೆ, ಗೌರವ ಎಷ್ಟು ಇದೆ ಎಂಬುದು ಅವನ ನಟನೆಯಲ್ಲೇ ಗೊತ್ತಾಗುತ್ತೆ. ನಿರರ್ಗಳ ಮಾತು, ಬ್ಲಾಕಿಂಗ್ ಜತೆ ನಟನೆ, ತುಂಬಾ ಹಿಡಿತದ ಚಲನೆಗಳು ನಿರ್ದೇಶಕರನ್ನು ನಾಟಕವನ್ನು ಗೆಲ್ಲಿಸಿದೆ. ಒಂದಷ್ಟು ಸೆಟ್ಟಿಂಗ್ ಇಲ್ಲದೆ ಸಾಂಕೇತಿಕ ಪ್ರಾಪರ್ಟಿ ಕೂಡ ಸ್ಟೇಝ್‌ಗೆ ಇನ್ನು ಹೆಚ್ಚಿನ ಮೆರುಗನ್ನು ನೀಡಿದೆ. ಲೈಟಿಂಗ್ ನಲ್ಲಿ ಹೊಸ ಗಿಮಿಕ್ಸ್ ರಂಜಿಸಿತು. ಅಲ್ಲಿಯೂ ಬಣ್ಣದ ಬೆಳಕುಗಳು ಮಾತಾಡಿದವು. ಒಟ್ಟಿನಲ್ಲಿ ಮುಂಬಯಿ ಕಲಾಭಿಮಾನಿಗಳಿಗೆ ಇದೊಂದು ಅಪೂರ್ವ ಅನುಭವವನ್ನು ನೀಡಿತು.



ಮೈಸೂರು ಅಸೋಸಿಯೇಶನ್ ಮುಂಬೈ ವತಿಯಿಂದ ಮೇ 28ರಂದು ಸಂಜೆ 6 ರಿಂದ ಮಾಟುಂಗ ಪೂರ್ವದ ಮೈಸೂರು ಅಸೋಸಿಯೇಶನ್ ಸಭಾಗೃಹದಲ್ಲಿ ನಡೆದ 2022ನೇ ಸಾಲಿನ ಜಾಗತಿಕ ಕನ್ನಡ ಏಕಾಂಕ ನಾಟಕ ರಚನೆ ಸ್ಪರ್ಧೆಯ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಆಯೋಜಿಸಲಾಗಿದ್ದ ಬಾಲ ಕಲಾವಿದ ಮಾಸ್ಟರ್ ಗೋಕುಲ ಸಹೃದಯ ಅವರ ಚಿಟ್ಟೆ ಎಂಬ ವಿಶೇಷ ಏಕವ್ಯಕ್ತಿ ಕನ್ನಡ ನಾಟಕವು ಪ್ರದರ್ಶನಗೊಂಡು ಎಲ್ಲರ ಪ್ರಶಂಸೆಗೆ ಪಾತ್ರವಾಯಿತು.



ಬಣ್ಣ ಬಣ್ಣದ ಕನಸು ಕಾಣುವ ಸತ್ಯಕ್ಕೆ ಹತ್ತಿರವಾದ ಎಳಸು ಭಾವನೆಗಳನ್ನು ಎಳೆ ಎಳೆಯಾಗಿ ಬಿಡಿಸಿಟ್ಟ ಪುಟ್ಟ ಬಾಲಕ ಗೋಕುಲ ಸಹೃದಯ ಮುಂಬಯಿ ಮನಸುಗಳಲ್ಲಿ ಮನಸಿನ ಕನಸಿನ ಭಾವನೆಗಳನ್ನು ಭಿತ್ತರಿಸಿ ಮತ್ತೆ ಹಾರಿ ಹೋಗಿದ್ದಾನೆ. ಆ ಭಾವನೆಗಳ ಚಿಟ್ಟೆ ಮುಂಬಯಿಗರ ಮನಸಿನಲ್ಲಿ ಹಾಗೇ ಹಾರಲು ಶುರು ಮಾಡಿದೆ. ಇದಕ್ಕೆ ಕಾರಣ ಆ ನಾಟಕದ ವಿಷಯ, ನಟನೆ ಮತ್ತು ಪರಿಕರ, ಚಿಟ್ಟೆಗಳ ಜತೆ ಮಾತು, ಕೆರೆಗಳ ಸಂಗ ಮುನಿಸು, ಅಮ್ಮನ ಪ್ರೀತಿ, ಅಪ್ಪನ ಬವಣೆ, ಎಳಸು ಕನಸುಗಳು, ಭಯ ಭಕ್ತಿ, ಅರ್ಹವಾಗದ ಬದುಕಿನ ದಾರಿ ಇವೆಲ್ಲವನ್ನು ಈ ಪೋರ ಪೂರ್ತಿಯಾಗಿ ಪೋಣಿಸಿ ಬಣ್ಣಿಸಿ ಉಣ ಬಡಿಸಿದ್ದಾನೆ. ಹಸಿವು ಯಾಕಾಗುತ್ತೆ ಅನ್ನುವ ಈ ಕಂದನ ಪ್ರಶ್ನೆಗೆ ಮುಂಬಯಿ ಕನ್ನಡಿಗರೇ ಸಾಕ್ಷಿ. ಈ ಹಸಿವೇ ಸಾವಿರ ಮೈಲು ದೂರದ ಮುಂಬಯಿಯನ್ನು ತುಳು–ಕನ್ನಡಿಗರಿಗೆ ಪರಿಚಯಿಸಿದ್ದು ಎಂದರು ತಪ್ಪಾಗಲಾರದು. ಈ ಪುಟ್ಟ ಬಾಲಕ ಎಲ್ಲರ ಮನಸ್ಸಿಗೆ ತುಂಬಾ ಹತ್ತಿರವಾಗಿ ಬಿಟ್ಟಿದ್ದಾನೆ.

ಈಗಿನ ಮಕ್ಕಳ ಸ್ಕೂಲ್ ಟಿಫಿನ್‌ಗೆ ಒಂದಲ್ಲ ಎರಡೆರಡು ತಿಂಡಿ ಮಾಡಿಕೊಡ್ತಾರೆ. ಈ ಮಧ್ಯೆ ಈಗಿನ ಮಕ್ಕಳಿಗೆ ಹಸಿವು ಅಂದರೇನು ಅಂತ ನಿಜವಾದ ಅರ್ಥ ಗೊತ್ತಿರುವುದು ಕಷ್ಟ ಆದರೆ ಹೊಟ್ಟೆಗೆ ಹಿಟ್ಟಿಲ್ಲದ ಮನೆಯ ಮಗುವಿಗೆ ಸ್ಕೂಲ್‌ನಲ್ಲಿ ಬಹುಮಾನದ ರೂಪದಲ್ಲಿ ಟಿಫನ್ ಬಾಕ್ಸ್ ಸಿಕ್ಕಾಗ ನೋಡಿ ಖುಷಿ ಪಡುವ ಬದಲು ಮನಸಲ್ಲಿ ನೋವು ಆವರಿಸಿ ಬಿಡುತ್ತೆ. ಚಿಟ್ಟೆಯ ಕಂಗಳಲ್ಲಿ ಕಣ್ಣೀರ ಬರಿಸುತ್ತೆ ಕಾರಣ ಇಷ್ಟೇ ಟಿಫನ್ ಬಾಕ್ಸ್‌ಗೆ ಹಾಕಿಕೊಡಲು ಅನ್ನದ ಅಗುಳೇ ಇಲ್ಲ. ಸ್ವತಃ ಕಂದಮ್ಮನೇ ಊಟ ಮಾಡಿ ನಾಲ್ಕು ದಿನವಾಗಿದೆ. ಇನ್ನು ಟಿಫಿನ್‌ಗೆ ತುಂಬಿಸೋದು ದೂರದ ಮಾತು, ಆದರೂ ಅಮ್ಮ ಎನ್ನುವ ದೇವರು ಒಂದಿನ ಟಿಫನ್ ತುಂಬಿಸಿ ಕೊಡ್ತೀನಿ ಅನ್ನುವ ಭರವಸೆಯನ್ನು ಮುಗ್ಧ ಮನಸ್ಸಲ್ಲಿ ಮೂಡಿಸಿ ಬಿಡುತ್ತಾಳೆ. ಪ್ರಸ್ತುತ ಹಸಿವೆ ಕಾಣದ ಕೂಸು ಹಸಿವನ್ನು ಅನುಭವಿಸಿ ಅಭಿನಯಿಸಿದ್ದು ನಿಜಕ್ಕೂ ಅನಿಸಿದೆ.



ಬಿರಿಯಾನಿಯ ಪರಿಮಳದಲ್ಲೇ ಹೊಟ್ಟೆ ತುಂಬಿಸುವಾಗ ಹೊಟ್ಟೆ ಚುರ್ ಅನ್ನೋದು ಸಹಜ. ತನ್ನ ತಂಗಿಗೆ ಹಾಲೂಂತ ನೀರೇ ಕುಡಿಸಿ ನಿದ್ದೆ ಬರಿಸಿದ್ದು ಪಾಪ ಆ ಪಾಪುಗೆ ಹಾಲಿನ ಪರಿಚಯವೇ ಇಲ್ವಲ್ಲಾ ಹಸಿವಿಗೇ ನೀರಾದರೇನು ಹಾಲಾದರೇನು, ನಮ್ಮ ದೇಶದಲ್ಲಿ ಈಗಲು ಹಸಿವಿನಿಂದ ಸಾಯುವ ಜನರ ಸಂಖ್ಯೆ ಕಡಿಮೆ ಏನಿಲ್ಲಾ. ಇದನ್ನೆಲ್ಲಾ ಅರಿತ ಕಥೆಗಾರರು ತುಂಬಾ ನಾಜೂಕಾಗಿ ಈ ನಾಟಕವನ್ನು ಪೋಣಿಸಿಕೊಟ್ಟಿದ್ದಾರೆ. ವಿರಳ ವಿಷಯವನ್ನು ಸರಳವಾಗಿ ಕಟ್ಟಿಕೊಟ್ಟು ಮಕ್ಕಳ ಭಾಷೆಯನ್ನೇ ಉಪಯೋಗಿಸಿ ಗೋಕುಲನನ್ನು ಇನ್ನಷ್ಟು ಹತ್ತಿರ ಆಗಿಸಿದ್ದಾನೆ. ಮನಸ್ಸಿನ ಭಾವನೆಗಳನ್ನು ಕಟ್ಟಿ, ಕೊಡುವಲ್ಲಿ ಒಂದು ಯಶಸ್ವಿ ಪ್ರಯೋಗವಿದು. ನಿರ್ದೇಶಕರು ಇಲ್ಲಿ ತನ್ನದೇ ಛಾಪನ್ನು ಮೂಡಿಸಿ ಬಿಟ್ಟಿದ್ದಾರೆ. ಕಥೆಯ ಮಧ್ಯೆ ಬರುವ ಹಾಡುಗಳು, ಆಲಾಪಗಳು, ಸಂಗೀತದ ತುಣುಕುಗಳು ನಾಟಕವನ್ನು ಇನ್ನಷ್ಟು ಶ್ರೀಮಂತಗೊಳಿಸಿದ್ದಾರೆ. ಕನಸು, ಮನಸು, ಋಣ, ಶಿಕ್ಷಣ, ಆಸೆ ಆಕಾಂಕ್ಷೆ, ಪ್ರೀತಿ ನೀತಿ, ಸಂಸಾರ ಹಸಿವು, ಕಲೆ ಬೆಲೆ ಇವೆಲ್ಲವನ್ನು ಚಿಟ್ಟೆ ವೇದಿಕೆಯ ಮೇಲೆ ತಂದು ಮುಂಬಯಿ ಕಲಾಭಿಮಾನಿಗಳಿಗೆ ಅದರ ರುಚಿಯನ್ನು ಉಣಬಡಿಸಿದೆ.

ಲೇಖನ: **ಸೂರಿ ಮಾರ್ನಾಡ್** ಕೃಪೆ : ಉದಯವಾಣಿ

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077